# ತಪೋವಾಣಿ

ಸಂ. 6 ಸಂ. 10 ಅಕ್ಟೋಬರ್ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಸೃಷ್ಟಿ, ಹುಟ್ಟು–ಸಾವು, ಪುನರ್ಜನ್ಮ, ಕರ್ಮದ ನಿಯಮಗಳು ಇತ್ಯಾದಿ, ವಾಸ್ತವಗಳ ಜ್ಞಾನವನ್ನು ಆಧಾರವಾಗಿಟ್ಟುಕೊಂಡು ನಮ್ಮ ಪೂರ್ವಜರು, ನಮ್ಮ ದೈನಂದಿನ ಬದುಕಿನ ರೀತಿಗಳು ವಿಶ್ವದ ಬದುಕಿನೊಂದಿಗೆ ಹೊಂದಿಕೊಳ್ಳುವಂತೆ ರೂಪಿಸಿದರು. ನಮ್ಮ ಬದುಕು ಮತ್ತು ವಿಶ್ವದ ಬದುಕು ಚೆನ್ನಾಗಿ ಹೊಂದಿಕೊಂಡಿದ್ದವು. ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ಕ್ರಿಯೆಗಳಲ್ಲಿ ಸಂಪೂರ್ಣ ಹೊಂದಾಣಿಕೆ ಇತ್ತು.

ಮತ್ತು ನಾವು ಶಾಂತಿ ಮತ್ತು ಸಂತೃಪ್ತಿಗಳಿಂದ ಬಾಳುತ್ತಿದ್ದೆವು.

ಸಾವಿರಾರು ವರ್ಷಗಳು ಕಳೆದವು. ಯುಗ ಬದಲಾಯಿತು. ನಮ್ಮ ಭೂಮಿಯ ಹಿರಿಯರು, ತಮ್ಮ ಅಸ್ತಿತ್ವವನ್ನು ಇತರ ಸೂಕ್ಷ್ಮ ಪ್ರಪಂಚಗಳಿಗೆ ಬದಲಾಯಿಸಿದರು ಮತ್ತು ಅಲ್ಲಿಂದ ನಮ್ಮನ್ನು ಮಾರ್ಗದರ್ಶಿಸುವುದನ್ನು ಮುಂದುವರಿಸಿದರು. ನಂತರ, ನಾವು ಕತ್ತಲಯುಗ, ಕಲಿಯುಗವನ್ನು ಪ್ರವೇಶಿಸಿದಂತೆ, ನಾವು ಅವರೊಂದಿಗೆ ಸಂಪರ್ಕವನ್ನು ಕಳೆದುಕೊಡೆವು ಮತ್ತು ಅವರ ಮಾರ್ಗದರ್ಶನವನ್ನು ಕಳೆದುಕೊಂಡೆವು. ಕಾಲಕಳೆದಂತೆ ಪೂಜಾರಿ ವರ್ಗದವರು, ನಮ್ಮ ಜೀವನವನ್ನು ತಮ್ಮ ಕೈಗೆ ತೆಗೆದುಕೊಂಡರು; ಜ್ಞಾನವನ್ನು ತಮಗೆ ಬೇಕಾದ ರೀತಿಗಳಲ್ಲಿ ಅರ್ಥೈಸಿದರು ಮತ್ತು ನಮ್ಮ ಬದುಕಿಗೆ ಮಾರ್ಗದರ್ಶನ ಸೂತ್ರಗಳನ್ನು ಕೊಟ್ಟರು. ಅದರಲ್ಲಿ ಅನೇಕ ಕೊರತೆಗಳು ಮತ್ತು ವಿರೂಪಗಳು ಇದ್ದವು. ನಮ್ಮ ಬದುಕು ವಿಶ್ವದೊಂದಿಗೆ ಹೊಂದಾಣಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿತು.

ಮತ್ತು ನಾವು ಶಾಂತಿಯನ್ನು ಕಳೆದುಕೊಂಡೆವು ಹಾಗೂ ಸಂತೃಪ್ತಿ ಇಲ್ಲವಾಯಿತು.

ಈ ನೂರಾರು ವರ್ಷಗಳಲ್ಲಿ, ವಿಶ್ವದಲ್ಲಿ ಬೇಕಾದಷ್ಟು ಬದಲಾವಣೆಗಳು, ಬೆಳವಣಿಗೆಗಳು ಆಗಿವೆ. ವಿಶ್ವದೊಂದಿಗೆ ಸಂಪರ್ಕ ಇಲ್ಲದಿರುವುದರಿಂದ, ನಮಗೆ ಇವುಗಳ ಅರಿವಿಲ್ಲ. ವಿಶ್ವದಲ್ಲಿ ಆಗುವ ಬದಲಾವಣೆಗಳು ನಮ್ಮ ಇಲ್ಲಿನ ಜೀವನದ ಮೇಲೆ ಪರಿಣಾಮ ಬೀರುತ್ತವೆ. ಇಲ್ಲಿ ಸುಖ ಮತ್ತು ಶಾಂತಿಯಿಂದ ಬಾಳಲು, ನಾವು ವಿಶ್ವದೊಂದಿಗೆ ಮರು–ಶ್ರುತಿಗೊಳ್ಳಬೇಕು. ಆದರೆ ಇದನ್ನು ಮಾಡುವುದು ಹೇಗೆ ಎಂಬುದು ನಮಗೆ ಗೊತ್ತಿಲ್ಲ. ಪೂಜಾರಿ ವರ್ಗದವರಿಗೆ ನಮ್ಮನ್ನು ಮಾರ್ಗದರ್ಶಿಸಲು ಆಗುವುದಿಲ್ಲ ಏಕೆಂದರೆ ಅವರು ಈ ಭೂಮಿಯ ಹಿರಿಯರೊಂದಿಗೆ ಸಂಪರ್ಕದಲ್ಲಿಲ್ಲ ಮತ್ತು ವಿಶ್ವದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಅವರಿಗೆ ಏನೂ ತಿಳಿದಿಲ್ಲ. ಅವರು ಅಜ್ಞಾನದಲ್ಲೇ ಬದುಕು ಸಾಗಿಸುತ್ತಾರೆ.

ಈಗಿನ ಪರಿಸ್ಥಿತಿ ಮತ್ತು ಮುಂದೆ ಬರುವ ಕಾಲ ನಿರಾಶಾದಾಯಕವೇನಲ್ಲ. ಇಲ್ಲಿ–ಈಗ, ಕೆಲವು ಜನರಿದ್ದಾರೆ. ಅವರು ಸೂಕ್ಷ್ಮ ಪ್ರಪಂಚಗಳಲ್ಲಿರುವ ಹಿರಿಯರನ್ನು ಸಂಪರ್ಕಿಸಬಲ್ಲರು. ಅವರು ಹೊಸ ಜ್ಞಾನ ಮತ್ತು ಹೊಸ ಚೈತನ್ಯಗಳನ್ನು ಪಡೆದು, ನಾವು ಶಾಂತಿ ಮತ್ತು ಸಂತೃಪ್ತಿಗಳತ್ತ ಸಾಗಲು ಸಹಾಯ ಮಾಡಬಲ್ಲರು.

ಕಾಲದ ಈ ಚಿಕ್ಕ ಅವಧಿ, ಕತ್ತಲಯುಗದಿಂದ ಬೆಳಕಿನ ಯುಗಕ್ಕೆ ಬದಲಾವಣೆಗೊಳ್ಳುವ ಸಂಕ್ರಮಣ ಕಾಲ. ಇದು ಗೊಂದಲ–ಅಸ್ತವ್ಯಸ್ತಗಳ ಕಾಲ ಕೂಡ. ಆದರೆ ವಿಶ್ವ ಅನೇಕ ಬೆಳಕಿನ ಕಾರ್ಯಕರ್ತರನ್ನು ಕಳಿಸಿದೆ. ಅವರು ನಮ್ಮನ್ನು ಮಾರ್ಗದರ್ಶಿಸಲು ಮತ್ತು ಮುಂದೆ ಕರೆದೊಯ್ಯಲು ಇಲ್ಲಿದ್ದಾರೆ. ವಿರೂಪಣೆ ಮತ್ತು ಶೋಷಣೆಗಳ ಅಸ್ತವ್ಯಸ್ತೆಗಳಿಂದ ನಮ್ಮನ್ನು ದೂರ ಕರೆದೊಯ್ಯಲು ಬೆಳಕಿನ ಎಲ್ಲ ಶಕ್ತಿಗಳು ಮತ್ತು ವಿವೇಕ, ಒಟ್ಟಾಗಿ ಸೇರಿವೆ.

ನಾವು ಎಚ್ಚರ ಆಗಬೇಕು ಬೆಳಕನ್ನು ಆಯ್ಕೆ ಮಾಡಿಕೊಳ್ಳಬೇಕು. ಆಗ ನಮಗೆ ಎಲ್ಲ ಮಾರ್ಗದರ್ಶನ ಮತ್ತು ಸಹಾಯ ದೊರೆಯುತ್ತದೆ.

ಹಾಗೂ ನಾವು ಧ್ಯಾನ ಮಾಡಿದರೆ, ಈ ಭೂಮಿಯ ಹಿರಿಯರು ಮತ್ತು ವಿಶ್ವದೊಂದಿಗೆ ಸಂಪರ್ಕ ಪಡೆಯುತ್ತೇವೆ. ಜ್ಞಾನ ಮತ್ತು ಮಾರ್ಗದರ್ಶನವನ್ನು ನೇರವಾಗಿ ಪಡೆಯುತ್ತೇವೆ.

ಶಾಂತಿ ಮತ್ತು ಸಂತೃಪ್ತಿಗಳನ್ನು ಪಡೆಯಲು ಧ್ಯಾನ ಅತ್ಯವಶ್ಯವಾಗಿ ಬೇಕೇ ಬೇಕು. ಹೊಸ ಚೈತನ್ಯಗಳಿಂದ ಚಾಲನೆಯಾಗುವ ಹೊಸ ಪ್ರಕ್ರಿಯೆಗಳು ಕಾರ್ಯೋನ್ಮುಖವಾಗಲು ದೀರ್ಘ ಕಾಲದ ಧ್ಯಾನಗಳ ಅಗತ್ಯವಿದೆ. ಆದರೆ ಧ್ಯಾನ ಒಂದೇ ಸಾಲದು.

ಗಾಢವಾದ ಧ್ಯಾನಗಳಲ್ಲಿ ಉಂಟಾಗುವ ಅನುಭವಗಳಿಂದ ಬರುವ ವಿವೇಕವನ್ನು ನಮ್ಮ ದಿನನಿತ್ಯ ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕು ಮತ್ತು ನಮ್ಮ ಬದುಕನ್ನು ಇಡೀ ವಿಶ್ವಕ್ಕೆ ಹಿಗ್ಗಿಸಬೇಕು. ವಿಸ್ತರಣೆ ನಮ್ಮಲ್ಲಿ ಕಡ್ಡಾಯವಾಗಿ ಆಗಬೇಕು. ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ಕ್ರಿಯೆಗಳಲ್ಲಿ ವಿಸ್ತರಣೆ ಆಗಬೇಕು. ವಿಸ್ತರಣೆಯಲ್ಲಿ ಬೆಳವಣಿಗೆ ಇದೆ. ಅದು, ಆಧ್ಯಾತ್ಮಿಕ ಬೆಳವಣಿಗೆ. ❑

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@saptarishis.com ವೆಬ್–ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



30-8-2009ರಂದು 350ಕ್ಕೂ ಹೆಚ್ಚು ಜನ ಮಹರ್ಷಿ ಅಮರರ ದಿವ್ಯಸ್ಮರಣೆಗಾಗಿ ಸೇರಿದ್ದರು.

### ಸುದ್ದಿ-ಸೂಚನೆ

- ನಾಡಗೌಡ ಗೊಲ್ಲಹಳ್ಳಿಯಲ್ಲಿ ನವೀಕರಣ ಗೊಂಡಿರುವ ಎಲ್ಲಮ್ಮ ದೇವಸ್ಥಾನವನ್ನು 19-9-2009ರಂದು ಉದ್ಘಾಟನೆ ಮಾಡಲಾಯಿತು.
- ಕಳೆದ 3ತಿಂಗಳಿಂದ ಪ್ರತಿದಿನ 3ಗಂಟೆಗಳ ಧ್ಯಾನ ಮಾಡಿರುವ ಸಾಧಕರನ್ನು 30-8-2009ರಂದು ರಾ-ಗ್ರೂಪಿಗೆ ಇನಿಷಿಯೇಟ್ ಮಾಡಲಾಯಿತು. ಅದೇ ದಿನ ಲೈಟ್ ಚಾನಲ್ ಕಾರ್ಯಕರ್ತ ತಂಡ ಕೂಡ ಪ್ರಾರಂಭವಾಯಿತು.
- ಅಧ್ಯಯನ ಕೇಂದ್ರದ ಕಾರ್ಯ ಇನ್ನೊಂದು ಮಟ್ಟಕ್ಕೆ ಏರಿದೆ. ಈಗ ಹೆಚ್ಚು ಜನ ಹೊಸ ಪ್ರಾಜೆಕ್ಟ್‌ಗಳಿಗಾಗಿ ಕೆಲಸ ಮಾಡುತ್ತಿದ್ದಾರೆ.
- 30-8-2009ರಂದು "Beyond 2012" ಪುಸ್ತಕ; "2012- End or Beginning" ಪುಸ್ತಕದ ಕನ್ನಡ, ಮರಾಠಿ ಮತ್ತು ತಮಿಳು ಅನುವಾದಗಳು; "Light" ಪುಸ್ತಕದ ಕನ್ನಡ, ಮರಾಠಿ, ತಮಿಳು, ತೆಲುಗು, ಮತ್ತು ಹಿಂದಿ ಅನುವಾದಗಳು; ಮತ್ತು "ಧ್ಯಾನಯೋಗ" ಹಿಂದಿ ಅನುವಾದಿತ ಪುಸ್ತಕಗಳು ಬಿಡುಗಡೆಯಾದವು.
- ದೂರಕಲಿಕೆ ಸಾಧಕರು ಈ ತಿಂಗಳಿಂದ ವಾರಾಂತ್ಯದಲ್ಲಿ ತಪೋನಗರದಲ್ಲಿ ತಂಗಲು ಅವಕಾಶವಿದೆ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 12ರವರೆಗೆ<br>ವಿಶೇಷ ಧ್ಯಾನ:<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನಲ್:<br>ಬೆಳಿಗ್ಗೆ 10 ರಿಂದ 1 ರವರೆಗೆ |
| ಅಕ್ಟೋಬರ್18 | ಮಧ್ಯಾಹ್ನ 2 ಗಂಟೆಗೆ ವಿಶೇಷ ರಾ-ಗ್ರೂಪ್ ಮೀಟಿಂಗ್<br>ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ ಗ್ರೂಪ್ ಮೀಟಿಂಗ್ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 02-8-09 | ಶಾಂತಾ ಲಕ್ಷ್ಮೀಕಾಂತ್, ಕೃಷ್ಣಕುಮಾರ್ ಮತ್ತು ಪ್ರಭ |
| 09-8-09 | ಅಭಿಜಿತ್ ಶಿಂಗಾಡೆ ಮತ್ತು ಸಾತ್ವಿಕ್ |
| 16-8-09 | ಅರ್ಚನಾ ಹರೀಶ್ ಮತ್ತು ಭೂದೇವಿ |
| 23-8-09 | ಲಲಿತ ತೀರ್ಥ, ಉಷಾ ಮಂಜುನಾಥ್, ವಿಜಯಕುಮಾರ್, ಪುಂಡಲೀಕ್, ಹರ್ಷ, ಹರ್ಷಿತ ಮತ್ತು ಬಾಲಸುಬ್ರಮಣ್ಯಂ |
| 30-8-09 | ಕಾರ್ತಿಕೇಯನ್, ಕೇತ್ಕಿ ತಲ್ವಾಲ್ಕರ್ ಮತ್ತು ರಾಮಕೃಷ್ಣ ಮಾಳವಾಡೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಭಾನು | ಪೂರ್ಣಿಮಾ |
| 11 | ಭಾನು | ಕೃಷ್ಣಾಷ್ಟಮಿ |
| 16 | ಶುಕ್ರ | ಮಾಸ ಶಿವರಾತ್ರಿ |
| 17 | ಶನಿ | ನರಕ ಚತುರ್ದಶಿ/ಮಹಾಲಕ್ಷ್ಮಿ ಪೂಜೆ |
| 18 | ಭಾನು | ಅಮಾವಾಸ್ಯೆ |
| 19 | ಸೋಮ | ದೀಪಾವಳಿ |
| 28 | ಬುಧ | ಶುಕ್ಲದಶಮಿ |

**ಭಜನೆ CD ಮತ್ತು ಧ್ವನಿ CD ಗಳಿಗಾಗಿ ಕಚೇರಿಯನ್ನು ಸಂಪರ್ಕಿಸಿ.**

**ಭಾನುವಾರದ ಗುರೂಜಿಯವರ ಉಪನ್ಯಾಸದ DVDಗಳು ಸದಸ್ಯರಿಗೆ ಲಭ್ಯವಿದೆ. ಸದಸ್ಯತನದ ವಿವರಕ್ಕಾಗಿ ಕಚೇರಿಯನ್ನು ಸಂಪರ್ಕಿಸಿ.**

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು**
**ಪ್ರಗತಿ ರಾಜ್ ಮತ್ತು ಶ್ಯಾಮಲ ಎಂ. ಪರ್ಮಾರ್**

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

### ಸೂಚನೆ

- ಈಗಿನಿಂದ ಎಲ್ಲಾ ಸಾಧಕರೂ ಬಿಳಿ ಬೆಳಕನ್ನು ಚಾನಲ್ ಮಾಡಬೇಕು.
  (ವಿವರಗಳಿಗೆ 3ನೇ ಪುಟವನ್ನು ನೋಡಿ)
- ದೂರಕಲಿಕೆ ಸಾಧಕರು 3ತಿಂಗಳು ಪ್ರತಿದಿನ 3ಗಂಟೆ ಧ್ಯಾನ ಮಾಡಿದ ನಂತರ ರಾ-ಗ್ರೂಪ್‌ಗೆ ಸೇರಬಹುದು.

# ಮಹರ್ಷಿ ಅಮರರವರ ಮಹಾಸಮಾಧಿ ದಿನದಂದು

**(30-8-2009ರ ಗುರೂಜಿಯವರ ಉಪನ್ಯಾಸದ ಕೆಲವು ಭಾಗಗಳು)**

**ಸಂ: ಶೋಭಾರಾವ್; ಅನು:ವಿಶ್ವನಾಥ್ ಎಂ. ಎನ್**

ಈ ದಿನ ಇಲ್ಲಿ ಸೇರಿರುವ ನಾವೆಲ್ಲ ನಿಜಕ್ಕೂ ಧನ್ಯರು.

ಅಮರರವರು ತಾವು ಋಷಿಗಳಿಂದ ಪಡೆದ ಧ್ಯಾನಶಾಸ್ತ್ರವನ್ನು ಜಗತ್ತಿಗೆ ಕೊಟ್ಟರು. ನಮ್ಮ ಬದುಕಿನಲ್ಲಿ ಋಷಿಗಳನ್ನು, ದೇವರನ್ನು ಪರಿಚಯಿಸಿದರು. ಅವರು ನಿಶ್ಚಿತವಾಗಿ ಅಸ್ತಿತ್ವದಲ್ಲಿದ್ದಾರೆ ಎಂದು ಅಮರ ನಮಗೆ ಹೇಳಿದರು ಏಕೆಂದರೆ ಋಷಿಗಳನ್ನು-ದೇವರನ್ನು ಅವರು ಸ್ವತಃ ಭೇಟಿಯಾಗಿದ್ದರು!

ಅಧ್ಯಾತ್ಮವೆಂದರೆ ಒಳ್ಳೆಯವರಾಗಿರುವುದು, ಪ್ರಾಮಾಣಿಕರಾಗಿರುವುದು ಎಂದು ಹೇಳಿದ್ದೇ ಅಮರ. ಅಷ್ಟು ಸ್ಪಷ್ಟವಾಗಿ, ಅಧಿಕಾರಯುತವಾಗಿ ಯಾರೂ ಮಾತನಾಡಿಲ್ಲ. ಅವರು ಹೊರ ಜಗತ್ತುಗಳನ್ನು ನಮಗೆ ಪರಿಚಯಿಸಿದರು. 'ಆತ್ಮದ ಅವರೋಹಣ'ದಲ್ಲಿ ಅವರು ಇಡೀ ಸೃಷ್ಟಿಯ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕತ್ತಲಯುಗವಾದ ಕಲಿಯುಗವು 1974ರಲ್ಲಿ ಕೊನೆಗೊಂಡಿತು ಎಂದು ಅವರು ತಿಳಿಸಿದರು. ಶಂಬಲ ಗೋಬಿ ಮರುಭೂಮಿಯಲ್ಲಿದೆ ಎಂದವರು ಹೇಳಲು ಕಾರಣ, ಅವರು ಅನೇಕ ಸಲ ಅಲ್ಲಿಗೆ ಭೇಟಿಯಿತ್ತಿದ್ದು.

ಅವರು, 'ನಮ್ರತೆ ನಮ್ಮ ಆಧ್ಯಾತ್ಮಿಕ ಪ್ರಗತಿಯ ಮಾನದಂಡ. ನಮ್ಮ ಮತ್ತು ದೇವರ ನಡುವಿನ ಅತಿದೊಡ್ಡ ಅಡಚಣೆ, ನಮ್ಮ ಅಹಂ. ಕಾವಿಯನ್ನು ಇನ್ನೊಬ್ಬರು ನಮ್ಮಲ್ಲಿ ಗುರುತಿಸಬೇಕೇ ಹೊರತು ನಾವದನ್ನು ಧರಿಸಬಾರದು. ಧ್ಯಾನವೆಂದರೆ ಏಕಾಗ್ರತೆಯಲ್ಲ. ಧ್ಯಾನಿಗಳ ಸಂಖ್ಯೆಗಿಂತ ಧ್ಯಾನಾಭ್ಯಾಸದ ಗುಣಮಟ್ಟ ಮುಖ್ಯ', ಎಂದು ತಿಳಿಸಿಕೊಟ್ಟರು. ಹೋಮ-ಯಜ್ಞ-ಕುಂಭಾಭಿಷೇಕಗಳ ನಿರರ್ಥಕತೆಯನ್ನು ನಮಗೆ ಮನದಟ್ಟು ಮಾಡಿಸಿದರು.

ಅಮರರವರು ನಮ್ಮ ಬದುಕಿನ ಬೆಳಕು. ಅಮರರೇ ಒಂದು ತತ್ವ. ಅವರು ವಿವರಿಸಿದ ಹಲವಾರು ಅದ್ಭುತ ವಿಷಯಗಳಲ್ಲಿ ಇಲ್ಲಿ ಕೆಲವನ್ನು ಹೇಳುತ್ತೇನೆ:

"ವಿಶ್ವ ಯಾವಾಗಲೂ ವಿವೇಕಶೀಲವಾಗಿರುತ್ತದೆ. ಈಗ ಅದು ಮತ್ತಷ್ಟು ವಿವೇಕಶೀಲವಾಗಿದೆ. ಅದು ಸದಾಕಾಲ ಆತ್ಮವಿಮರ್ಶೆ ಮಾಡಿಕೊಳ್ಳುತ್ತ, ತನ್ನ ನ್ಯೂನತೆಗಳನ್ನು ಒಪ್ಪಿಕೊಂಡು, ಸರಿಪಡಿಸಿಕೊಳ್ಳುವುದರಿಂದ ಅದರ ವಿವೇಕ ಹೆಚ್ಚುತ್ತಲೇ ಸಾಗುತ್ತದೆ. ಆತ್ಮವಿಮರ್ಶೆ, ಒಪ್ಪಿಕೊಳ್ಳುವಿಕೆ ಮತ್ತು ತಪ್ಪು-ತಿದ್ದುವಿಕೆ ನಮ್ಮ ಸಾಧನೆಯ ಭಾಗಗಳು. ತಪ್ಪು-ತಿದ್ದುವಿಕೆ ಮತ್ತು ಪುನರ್ವಿಮರ್ಶೆಯನ್ನು ವಿಶ್ವ ಈಗ ಅತ್ಯಂತ ತೀವ್ರವಾಗಿ ಮಾಡುತ್ತಿದೆ. ಮತ್ತು ಸೂಕ್ತ ಬದಲಾವಣೆಗಳನ್ನೂ ಮಾಡಲಾಗುತ್ತಿದೆ.

ಇನ್ನು ಮುಂದೆ ಅಂತ್ಯವಿಲ್ಲದ ಕ್ಷಮೆಯಿರುವುದಿಲ್ಲ, ಪರೀಕ್ಷೆಯಿಲ್ಲದೆ ಕೃಪೆಯೂ ಇರುವುದಿಲ್ಲ. ಇದು ತಕ್ಷಣದ ಕಾರ್ಯಾಚರಣೆಯ ಸಮಯ. ಯಾವುದಕ್ಕೇ ಆದರೂ ನಾವು ಅರ್ಹರಾಗಬೇಕಾಗುತ್ತದೆ.

ವ್ಯಕ್ತ ಮತ್ತು ಅವ್ಯಕ್ತ ಲೋಕಗಳ ಬಗ್ಗೆ ಋಷಿಗಳು ನಮಗೆ ಬಹಳಷ್ಟು ಜ್ಞಾನವನ್ನು ಕೊಡುತ್ತಿದ್ದಾರೆ. ಈಗ ಅನೇಕ ದರ್ಶನಗಳಾಗುತ್ತಿವೆ. ನಾವು ನಮ್ಮ ಅರಿವನ್ನು ವಿಸ್ತರಿಸಿ, ನಾವೆಲ್ಲಾ ಒಂದೇ ಎಂಬ ಅಂಶವನ್ನು ಅರಿಯಲಿ ಎನ್ನುವ ಉದ್ದೇಶದಿಂದ ಇವೆಲ್ಲವನ್ನು ಕೊಡಲಾಗುತ್ತಿದೆ.

ಇದು ಬೆಳಕಿನಲ್ಲಿ ಬದುಕಬೇಕಾದ ಕಾಲ. ಅದಕ್ಕಾಗಿ ನಾವು ಧ್ಯಾನಮಾಡಿ, ಸಕಾರಾತ್ಮಕಗೊಳ್ಳಬೇಕು."

ಇದು ತುಮುಲ-ಸಂಘರ್ಷಗಳ ಕಾಲ. "ತುಮುಲ ಒಳ್ಳೆಯದು. ಅದರಿಂದ ಹೊಸತು ಉದ್ಭವಿಸುತ್ತದೆ", ಎಂದು ವಿಶ್ವ ಎನ್ನುತ್ತದೆ. ಈ ವಿಶ್ವವು ಎಲ್ಲಾ ದೋಷಯುಕ್ತ ಮಾನವ ವ್ಯವಸ್ಥೆಗಳು ಕುಸಿದು ಅವುಗಳ ಜಾಗದಲ್ಲಿ ಹೊಸ ವ್ಯವಸ್ಥೆಗಳು ಉದ್ಭವಿಸುವಂತೆ ನೋಡಿಕೊಳ್ಳುತ್ತದೆ. ಈ ಹೊಸ ವ್ಯವಸ್ಥೆಗಳನ್ನು ಜಾರಿಗೆ ತರಲು ಬಹಳಷ್ಟು ಕೆಲಸ ನಡೆಯುತ್ತಿದೆ. ಇದರ ಪರಿಣಾಮಗಳನ್ನು ನಾವು ಸಧ್ಯದಲ್ಲೇ ನೋಡಲಿದ್ದೇವೆ.

ಆಗಸ್ಟ್ 25ರಿಂದ ಮೂರು ದಿನಗಳವರೆಗೆ ನಮ್ಮಲ್ಲಿ ಕೆಲವರು 'ರಾ' ಮತ್ತು ಕೆಲವು ಅತ್ಯಂತ ಪ್ರಮುಖ ಚೈತನ್ಯಗಳನ್ನು ಚಾನಲ್ ಮಾಡಿದೆವು. ಈ ಚೈತನ್ಯಗಳನ್ನು ರಾ-ಮಂದಿರದ ಕೆಳಗೆ 840 ಅಡಿಗಳ ಆಳದಲ್ಲಿ, ಒಂದು ಸೂಕ್ಷ್ಮ ಕೋಣೆಯಲ್ಲಿ ಸಂಗ್ರಹಿಸಲಾಗಿದೆ. ಈ ಚೈತನ್ಯಗಳಿರುವುದು ನಮ್ಮ ಬೆಳವಣಿಗೆ ಮತ್ತು ಬದಲಾವಣೆಗಾಗಿ. ಈ ಚಾನಲಿಂಗ್‌ನಲ್ಲಿ ಸೊಲೂಂಟ್ರ ಸೂಕ್ಷ್ಮಮಟ್ಟದಲ್ಲಿ ಭಾಗವಹಿಸಿದ್ದರು. ಆಕೆ 'ರಾ'ದಿಂದ ಪಡೆದ ಕೆಲವು ಸೂಚನೆಗಳು ಹೀಗಿವೆ: "ನಿಮ್ಮ ದೇಹವನ್ನು ಉಪವಾಸದ ಮೂಲಕ ಸಿದ್ಧಪಡಿಸಿಕೊಳ್ಳಿ. ನಕಾರಾತ್ಮಕ ಭಾವನೆಗಳು ಮತ್ತು ಆಲೋಚನೆಗಳು ಹೊರಹೊಮ್ಮಲು ಅವಕಾಶಕೊಡಿ. ಅವುಗಳನ್ನು ಅದುಮಿಡದೆ, ನೇರವಾಗಿ ಎದುರಿಸಿ, ನಿವಾರಿಸಿ. ನಿಮ್ಮನ್ನು ನೀವು ಹೀಲ್ ಮಾಡಿಕೊಳ್ಳಿ. ನಿಮ್ಮ ಅಂತರ್‌ಗ್ರಹಣಶಕ್ತಿಯಲ್ಲಿ ವಿಶ್ವಾಸವಿಡಿ."

ಅಧ್ಯಯನ ಕೇಂದ್ರ ಅದ್ಭುತವಾಗಿ ಕೆಲಸಮಾಡಿದೆ. ಈಗ ಅದು ಇನ್ನಷ್ಟು ವಿಸ್ತಾರಗೊಳ್ಳುತ್ತಿದೆ. ಭವಿಷ್ಯದಲ್ಲಿ ಇದು, ಮುಂದಿನ ಮುಖಂಡರ ತರಬೇತಿ ಕೇಂದ್ರವಾಗಲಿದೆ. ಭವಿಷ್ಯದ ಋಷಿಗಳನ್ನು ಈ ಕೇಂದ್ರದಲ್ಲಿ ತರಬೇತಿಗೊಳಿಸಲಾಗುತ್ತದೆ.

ಇವೆಲ್ಲ ಸಾಧ್ಯವಾದದ್ದು ಅಮರರಿಂದಾಗಿ. ಅವರಿಗೆ ಚೈತನ್ಯಗಳನ್ನು ಅರ್ಪಿಸುವ ಮೂಲಕ ನಮ್ಮ ಕೃತಜ್ಞತೆ ಮತ್ತು ಗೌರವಗಳನ್ನು ಸೂಚಿಸೋಣ. ❑

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ-ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ-ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ವಿಶ್ವನಾಥ್ ಎಂ. ಎನ್)

### 2–8–2009

ನಮ್ಮ ಶರೀರದಲ್ಲಿ ಬೆಳಕನ್ನು ಇಟ್ಟುಕೊಂಡು, ಬೆಳಕು ರಕ್ಷಾಕವಚದಂತೆ ಕೆಲಸಮಾಡಲು ನಾವು ಅನುವು ಮಾಡಿಕೊಡಬೇಕು. ಬೆಳಕು, ಸಾಂಕ್ರಾಮಿಕ ರೋಗಗಳಿಂದ ಕೂಡ ನಮಗೆ ರಕ್ಷಣೆ ಕೊಡುತ್ತದೆ. 'ರಾ' ಚೈತನ್ಯಗಳು ಇನ್ನೂ ಶಕ್ತಿಶಾಲಿಯಾದ ಕವಚದಂತೆ ಕೆಲಸಮಾಡುತ್ತವೆ. ನಮ್ಮ ಪರಿಶುದ್ಧತೆ ನಮ್ಮನ್ನು ರಕ್ಷಿಸುತ್ತದೆ.

ಹಂದಿಜ್ವರ ನಮ್ಮ ಸಾಮೂಹಿಕ ಕರ್ಮಗಳ ಫಲ. ಬೆಳಕನ್ನು ಸ್ವೀಕರಿಸಿ, ಸುತ್ತಲೂ ಹರಡುತ್ತ ನಿಮ್ಮ ಸುತ್ತಲೂ ಒಂದು ಬೆಳಕಿನ ಕವಚವನ್ನು ಇರಿಸಿಕೊಳ್ಳಿ. ಆಗ ನಿಮಗೆ ಹಂದಿಜ್ವರ ಬರುವುದಿಲ್ಲ. ಅಂದರೆ ಈ ಮಟ್ಟದಲ್ಲಿ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಮರೆತುಬಿಡಬೇಕು ಎಂದು ಅರ್ಥವಲ್ಲ. ಎಲ್ಲ ಎಚ್ಚರಿಕೆಗಳನ್ನು ಪಾಲಿಸಿ, ಬೆಳಕಿನ ಸಹವಾಸದಲ್ಲಿದ್ದರೆ ನಿಮಗೆ ಹಂದಿಜ್ವರ ತಟ್ಟುವುದಿಲ್ಲ.

ಆಗಸ್ಟ್ 28ರಿಂದ ಪ್ರಕಾಶಬ್ರಹ್ಮನ ಹೊಸಚೈತನ್ಯಗಳು ನಮಗೆ ಲಭ್ಯವಾಗುವುದರೊಂದಿಗೆ, ನಮ್ಮ ಕೆಲಸದಲ್ಲಿ ಹೊಸಶಕೆಯೊಂದು ಪ್ರಾರಂಭವಾಗಲಿದೆ. ಈ ಚೈತನ್ಯಗಳಲ್ಲಿರುವ ಅದ್ಭುತವಾದ ಜ್ಞಾನವನ್ನು ಗ್ರಹಿಸುವುದು ಅಷ್ಟು ಸುಲಭವಲ್ಲ. ಈ ಹೊಸ ಹಂತದಲ್ಲಿ ಕೆಲಸವಾಡುವ ಸಲುವಾಗಿ ಮಹತ್ತರವಾದ ಸಂಘಟನಾ ಕಾರ್ಯ ನಡೆಯುತ್ತಿದೆ. ಈ ಕೆಲಸದಲ್ಲಿ ಭಾಗವಹಿಸಲು ಮುಂದೆ ಬಂದಿರುವ ಎಲ್ಲರಿಗೂ ನಾವು ಅವಕಾಶ ಕೊಡುತ್ತೇವೆ. ಕೆಲವು ಸ್ಪಷ್ಟವಾದ ಸೂಚನೆಗಳಿಗಾಗಿ ನಾವು ಕಾಯುತ್ತಿದ್ದೇವೆ.

ವಿಶ್ವಾಸ, ನಮ್ಮ ಅಸ್ತಿತ್ವದ ಒಂದು ಸ್ಥಿತಿ. ಅದು ಶರಣಾಗತಿಯ ಭಾಗವೂ ಹೌದು. ಪ್ರೀತಿಯಿಂದ ವಿಶ್ವಾಸ ಹುಟ್ಟುತ್ತದೆ. ಜೀವನದಲ್ಲಿ ಅದನ್ನು ಸತತವಾಗಿ ಆಚರಿಸಬೇಕು. ವಿಶ್ವಾಸವನ್ನು ನೀವೇ ಸ್ವತಃ ಬೆಳೆಸಿಕೊಳ್ಳಬೇಕು. ಅದನ್ನು ಇನ್ನೊಬ್ಬರು ಕಲಿಸುವುದಾಗಲೀ, ಕೊಡುವುದಾಗಲೀ ಸಾಧ್ಯವಿಲ್ಲ. 'ವಿಶ್ವಾಸವಿಲ್ಲದಿದ್ದರೆ, ಬದುಕಿನಲ್ಲಿ ಯಾವ ಭರವಸೆಯೂ ಇಲ್ಲ,' ಎಂದು ಒಬ್ಬರು ಹೇಳಿದರು.

ತೀವ್ರವಾದ ಭಾವನೆಗಳು ನಮ್ಮನ್ನು ಜನರಿಗೆ ಮತ್ತು ವಸ್ತುಗಳಿಗೆ ಅಂಟಿಕೊಳ್ಳುವಂತೆ ಮಾಡಿ, ನಮ್ಮ ಬದುಕಿನಲ್ಲಿ ಅಲ್ಲೋಲಕಲ್ಲೋಲವೆಬ್ಬಿಸಿ, ಆಧ್ಯಾತ್ಮಿಕ ಪ್ರಗತಿಯನ್ನು ತಡೆಯುತ್ತವೆ. ಇವುಗಳನ್ನು ನಾವು ಉದಾತ್ತಗೊಳಿಸಬೇಕು ಅಥವಾ ಸಂಪೂರ್ಣವಾಗಿ ನಿವಾರಿಸಬೇಕು. ಅದಕ್ಕಾಗಿ ನಾವು ಧ್ಯಾನಾಭ್ಯಾಸ ಮಾಡಬೇಕು ಮತ್ತು ಸಕಾರಾತ್ಮಕ ಗೊಳ್ಳಬೇಕು. ಜೊತೆಗೆ ಬೆಳಕನ್ನು ಉಪಯೋಗಿಸಿ. ನಾವು ಕೊಟ್ಟಿರುವ ಎಲ್ಲ ಜ್ಞಾನ ಮತ್ತು ತಂತ್ರಗಳ ನೆರವಿನಿಂದ ಎಲ್ಲಾ ಮಟ್ಟಗಳಲ್ಲಿ ವಿಶಾಲಗೊಳ್ಳಲು ಪ್ರಯತ್ನಿಸಿ.

ನೀವು ಒಂಟಿಯಾಗಿರಲಿ ಅಥವಾ ಒಂದು ಗುಂಪಿನಲ್ಲಿರಲಿ, ಎಲ್ಲೇ ಇದ್ದರೂ ಆಧ್ಯಾತ್ಮಿಕ ವ್ಯಕ್ತಿಗಳಾಗಿರಬೇಕು. ಅಲ್ಪಕಾಲದ ಅಧ್ಯಾತ್ಮವನ್ನು ನಾವು ಅಭ್ಯಾಸ ಮಾಡಲು ಸಾಧ್ಯವಿಲ್ಲ. ವ್ಯಕ್ತಿಯೊಬ್ಬ, 'ನಾನು ಇನ್ನೊಬ್ಬನನ್ನು ಕೊಲ್ಲಬಹುದು. ಇದು ನನ್ನ ಸ್ವಂತ ವಿಷಯ', ಎಂದು ಹೇಳಿದರೆ ಆತ ಆಧ್ಯಾತ್ಮಿಕ ವ್ಯಕ್ತಿಯಲ್ಲ.

2009ರ ಡಿಸೆಂಬರ್‌ನಲ್ಲಿ ನಾವು ಫೋಟಾನ್ ಬೆಲ್ಟ್‌ನ ಪ್ರಭಾವಲಯವನ್ನು ಪ್ರವೇಶಿಸುವುದರಿಂದ, ಅಂದಿನಿಂದ ಭಾರೀ ಬದಲಾವಣೆಗಳು ಶುರುವಾಗುತ್ತವೆ. ಆಗ ಬಹಳಷ್ಟು ಗೊಂದಲ ವಿರುತ್ತದೆ; ಮತ್ತು ಸಾಕಷ್ಟು ಕೆಲಸವೂ ಇದ್ದು, ಅದಕ್ಕಾಗಿ ನಮಗೆ ಬಹಳ ಕಾರ್ಯಕರ್ತರ ಅಗತ್ಯಬೀಳುತ್ತದೆ. ವಿಶ್ವಾಮಿತ್ರ ಮಹರ್ಷಿಗಳು ಇದಕ್ಕಾಗಿ ಒಂದು ಹೊಸ ತಂಡವನ್ನು ರೂಪಿಸುತ್ತಿದ್ದಾರೆ.

ನಮ್ಮ ನಡುವಿನ ವ್ಯಕ್ತಿಯೊಬ್ಬರಿಗೆ ಈಗಾಗಲೇ ಋಷಿತ್ವದ ದೀಕ್ಷೆಕೊಟ್ಟಿರುವುದು ನಿಜಕ್ಕೂ ನಾವೆಲ್ಲ ಹೆಮ್ಮೆಪಡಬೇಕಾದ ಸಂಗತಿ. ಈಗ ಆಗಸ್ಟ್ 25ರಂದು ಇಬ್ಬರು ಮಹಿಳೆಯರಿಗೆ ಋಷಿತ್ವದ ದೀಕ್ಷೆ ಕೊಡಲಾಗುತ್ತದೆ. ಅದ್ಭುತ ಸಂಗತಿಗಳು ಜರುಗುತ್ತಿವೆ. ಜ್ಞಾನದ ಮಹಾಸ್ಫೋಟವೇ ಆಗಲಿದೆ.

### 9–8–2009

ಇದು ವಿಷಯಗಳನ್ನು ಹೊರಗೆಡಹುವ ಕಾಲ. ನಾವು ವಾಸಿಸುತ್ತಿರುವ ಪರಬ್ರಹ್ಮಲೋಕವಲ್ಲದೆ ಇನ್ನೂ ಹಲವಾರು ಲೋಕಗಳಿವೆ ಎಂದು ಋಷಿಗಳು ನಮಗೆ ತಿಳಿಸುತ್ತಿದ್ದಾರೆ. ನನಗೆ, ಒಂದು ಲೋಕದ ವಿವರಗಳನ್ನು ತಿಳಿದುಕೊಳ್ಳುವಂತೆ ಸೂಚಿಸಲಾಯಿತು. ಆಗ ಆ ಲೋಕವೇ ತನ್ನ ಬಗ್ಗೆ ತಿಳಿಸುತ್ತ, 'ಈ ಲೋಕದಲ್ಲಿ ಎಲ್ಲವೂ ಪ್ರೀತಿಯಿಂದ ತುಂಬಿದೆ', ಎಂದಿತು. ಅಲ್ಲಿ ಹಲವಾರು ಬಣ್ಣಗಳ ಜೊತೆಗೆ ನನಗೆ ಮುಖ್ಯವಾಗಿ ನಸುಗೆಂಪು ಬಣ್ಣ ಕಾಣಿಸಿತು. ಪ್ರೀತಿಯಿಂದ ತುಂಬಿದ್ದ ಬೆಳಕು ಮತ್ತು ಪ್ರೀತಿಯೇ ಮೈವೆತ್ತಂತಿದ್ದ ಜನರು ನನಗಲ್ಲಿ ಕಾಣಿಸಿದರು. ನಮ್ಮ ಭೂಮಿಯಲ್ಲಿ ತುಂಬಿ ಕೊಂಡಿರುವ ಅಪ್ರೇಮವನ್ನು ನಾಶಗೊಳಿಸಲು ಋಷಿಗಳು ಈ ಲೋಕದ ಚೈತನ್ಯಗಳನ್ನು ಕೆಳತರಲಿದ್ದಾರೆ. ಈ ಮಹಾನ್ ಕಾರ್ಯ ಆಗಸ್ಟ್ 25ರಿಂದ ಆರಂಭವಾಗಲಿದೆ.

ರಾ ಚೈತನ್ಯಗಳಲ್ಲಿ ಅದ್ಭುತವಾದ ಪ್ರೀತಿ ಮತ್ತು ಹೀಲಿಂಗ್ ಗುಣಗಳಿವೆ. ಅವು ನಮಗೆ ಅತ್ಯಂತ ತ್ವರಿತವಾಗಿ ಬೆಳೆಯಲು ನೆರವಾಗುತ್ತವೆ. ಆದರೆ ನಾವು ಸರಿಯಾಗಿ ಪ್ರತಿಕ್ರಿಯಿಸದಿದ್ದರೆ ಅವು ತಕ್ಷಣವೇ ನಮ್ಮನ್ನು ತಿದ್ದುತ್ತವೆ. 2012ರ ನಂತರ ನಾವು ಈ ಚೈತನ್ಯಗಳನ್ನು ಸ್ವೀಕರಿಸಲೇಬೇಕಾಗುತ್ತದೆ. ಬೇರೆ ದಾರಿಯೇ ಇಲ್ಲ. ನಾವು ಇಷ್ಟಪಡದಿದ್ದರೂ ಸಹ ಈ ಚೈತನ್ಯಗಳು ನಮ್ಮನ್ನು ಪ್ರವೇಶಿಸುತ್ತವೆ. ನಮ್ಮ ಇಚ್ಛಾಶಕ್ತಿಯನ್ನು ಸಂಪೂರ್ಣವಾಗಿ ಹಿಂಪಡೆಯಲಾಗುತ್ತದೆ ಅಥವಾ ಮೊಟಕು ಗೊಳಿಸಲಾಗುತ್ತದೆ.

ವಿಶ್ವಾಮಿತ್ರ ಮಹರ್ಷಿಗಳು ತಮ್ಮ ಹೊಸ ಗುಂಪಿನ ಸದಸ್ಯರ ಹೆಸರುಗಳನ್ನು ದೇವರ ಬಳಿ ನೊಂದಾಯಿಸಲಿದ್ದಾರೆ. ಎಲ್ಲಿಯವರೆಗೆ ಸೃಷ್ಟಿ ಇರುತ್ತದೆಯೋ ಅಲ್ಲಿಯವರೆಗೆ ಈ 'ವಿ' ತಂಡ ಅಸ್ತಿತ್ವದಲ್ಲಿರುತ್ತದೆ. ಅವರು ಸೂಕ್ಷ್ಮಮಟ್ಟದಲ್ಲಿ ಈಗಾಗಲೇ ಈ ವ್ಯಕ್ತಿಗಳೊಂದಿಗೆ ಮಾತನಾಡಿದ್ದಾರೆ. ಅವರೆಲ್ಲ ತ್ಯಾಗಗಳಿಗೆ ಸಿದ್ಧರಾಗಬೇಕು. ತಮ್ಮ ಅಹಂಅನ್ನು ಪಕ್ಕಕ್ಕಿರಿಸಬೇಕು.

ವಿವಿಧ ಹಂತಗಳಲ್ಲಿರುವ ಆಧ್ಯಾತ್ಮಿಕ ಸಾಧಕರನ್ನು ಗಮನಿಸುವುದು ನಿಜಕ್ಕೂ ಆಸಕ್ತಿಕರವಾಗಿರುತ್ತದೆ. ಕೆಲವರು ಧ್ಯಾನವೊಂದೇ ಸಾಕು ಎನ್ನುತ್ತ, ಸಕಾರಾತ್ಮಕಗೊಳ್ಳದೆ ಪರಿವರ್ತನೆ ಹೊಂದದೆ ಉಳಿಯುತ್ತಾರೆ. ಕೆಲವರು ತಂತ್ರಗಳಿಗೆ ಮಾರುಹೋಗುತ್ತಾರೆ. ಕೆಲವರು ಪದೇಪದೇ ಮಾರ್ಗಗಳನ್ನು ಬದಲಿಸುತ್ತಿದ್ದರೆ ಇನ್ನೂ ಕೆಲವರು ಕುಂಡಲಿನಿಯನ್ನು ಅರಸುತ್ತಾರೆ. ಕೆಲವು ಸಾಧಕರು ಎಲ್ಲವನ್ನೂ ವಿಶ್ಲೇಷಿಸುವ ಬುದ್ಧಿಜೀವಿ ವರ್ಗದವರು. ಇನ್ನೂ ಕೆಲವರು ಕೃತಕ ಸ್ವಭಾವದವರು. ಕೆಲವರು ಬೇಡಿಕೆಗಳೊಂದಿಗೆ ಬಂದು, ಅವು ಈಡೇರದಿದ್ದಾಗ ಕೋಪ ಗೊಳ್ಳುತ್ತಾರೆ. ಹಲವು ಸಾಧಕರು ಅನುಭವಗಳಿಗಾಗಿ ಹಾತೊರೆಯುತ್ತಾರೆ. ಇನ್ನೂ ಕೆಲವರು ತಮ್ಮದೇ ಆದ ಅಜೆಂಡಾಗಳೊಂದಿಗೆ ಬರುತ್ತಾರೆ. ಇದು ನಿಜಕ್ಕೂ ಅಪಾಯಕಾರಿ. ನಮ್ಮಲ್ಲಿಗೆ ಬರುವ ಯಾವುದೇ ವ್ಯಕ್ತಿಯನ್ನು ನಾವು ಪ್ರಾಮಾಣಿಕವಾಗಿ ಮಾರ್ಗದರ್ಶಿಸುತ್ತೇವೆ.

ಒಬ್ಬ ಗುರು ಮತ್ತು ಸಾಧಕನ ನಡುವೆ ಯಾವುದೇ ಅಂತರವಿಲ್ಲ. ವಿಶ್ವಾಸ ಮತ್ತು ಪ್ರಾಮಾಣಿಕ ಪ್ರೀತಿಯು ಈ ಅಂತರವನ್ನು ಮಾಯವಾಗಿಸುತ್ತವೆ.

### 16–8–2009

ಗಂಟೆಗಟ್ಟಲೆ ಯಾಂತ್ರಿಕವಾಗಿ ಧ್ಯಾನಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ನಾವು ಸಕಾರಾತ್ಮಕ ಗುಣಗಳನ್ನು ಬೆಳೆಸಿಕೊಳ್ಳಬೇಕು. ನಮ್ಮಲ್ಲಿ ದೇವರೆಡೆಗಿನ ಪ್ರೀತಿಯ ಕೊರತೆಯಿದೆ. ಮೂರು ಗಂಟೆಯ ಧ್ಯಾನದಲ್ಲಿ ಕನಿಷ್ಠ ಒಂದು ಗಂಟೆಯಾದರೂ ನಾವು ಸಮಾಧಿಯನ್ನು ಅನುಭವಿಸಬೇಕು. ಆಗ ಮಾತ್ರ ನಾವು ಆತ್ಮಸಾಕ್ಷಾತ್ಕಾರದ ಹಂತಕ್ಕೆ ಏರುತ್ತೇವೆ.

ಋಷಿಗಳು ಹೊಸಪ್ರಯೋಗಗಳನ್ನು ನಡೆಸುತ್ತಿದ್ದಾರೆ. ನಿಯಮಗಳನ್ನು ಪುನರ್

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ವಿಶ್ವನಾಥ್ ಎಂ. ಎನ್)

ರೂಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಒಂದು ಕರ್ಮದ ನಿಯಮದ ಬಗ್ಗೆ ಹೇಳುತ್ತೇನೆ: ತಪ್ಪು ಮಾಡಿದ ವ್ಯಕ್ತಿಯೊಬ್ಬನನ್ನು ನೀವು ಕ್ಷಮಿಸಿದಾಗ, ಆತನಿಗೆ ಯಾವ ಕರ್ಮವೂ ತಟ್ಟುವುದಿಲ್ಲ ಮತ್ತು ಆತನಿಗೆ ಇದರ ಬಗ್ಗೆ ತಿಳಿಯದೆಯೂ ಇರಬಹುದು. ಆದರೆ ಕ್ಷಮಿಸುವ ಮೊದಲು ಆತ ಪಶ್ಚಾತ್ತಾಪ ಪಡುವುದನ್ನು ನೀವು ಖಾತ್ರಿಪಡಿಸಿ ಕೊಳ್ಳಬೇಕು. ಆತನಿಗೆ ಪಶ್ಚಾತಾಪವಾಗಿದೆಯೇ ಎಂದು ನಮಗೆ ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅತ್ಯುತ್ತಮ ಕೆಲಸವೆಂದರೆ ಇದನ್ನು ದೇವರಿಗೆ ಹಸ್ತಾಂತರಿಸುವುದು.

ಆಗಸ್ಟ್ 28ರಿಂದ ಈ ಭೂಮಿಯ ಎಲ್ಲರಿಗೂ ರಾ–ಚೈತನ್ಯಗಳು ಲಭ್ಯವಾಗುತ್ತವೆ. ಈ ಚೈತನ್ಯಗಳೊಂದಿಗೆ ಯಾರೂ ಕೂಡ ನೇರವಾದ ಸಂಪರ್ಕಕ್ಕೆ ಬರುವುದು ಬೇಡ ಎಂದು ಋಷಿಗಳು ತೀರ್ಮಾನಿಸಿರುವುದರಿಂದ ನಾವು ರಾ–ಮಂದಿರವನ್ನು ಮುಚ್ಚುತ್ತೇವೆ. ರಾ–ಚೈತನ್ಯಗಳು ಮುಖ್ಯವಾಗಿ ನಮಗೆ ಪರಿಶುದ್ಧಗೊಳ್ಳಲು ಮತ್ತು 2012ರೊಳಗೆ ಬೆಳಕಿನ ದೇಹಗಳನ್ನು ಹೊಂದಲು ನೆರವಾಗುತ್ತವೆ. ಫೋಟಾನ್ ಬೆಲ್ಟ್ ಮತ್ತು ಪ್ರಕಾಶಬ್ರಹ್ಮ ಲೋಕದ ಸಾಮೂಹಿಕ ಚೈತನ್ಯಗಳ ಈ ಕಾಣಿಕೆಯನ್ನು ನಾವು ಸರಿಯಾಗಿ ಉಪಯೋಗಿಸಿ ಕೊಳ್ಳಬೇಕು. ಇಲ್ಲದಿದ್ದರೆ ಒಂದು ಅದ್ಭುತವಾದ ಅವಕಾಶವನ್ನು ನಾವು ಕಳೆದುಕೊಳ್ಳುತ್ತೇವೆ.

2012ರ ನಂತರ ನಾವು ರಾ–ಚೈತನ್ಯಗಳನ್ನು ಸ್ವೀಕರಿಸಲೇ ಬೇಕಾಗುತ್ತದೆ. ಈ ಚೈತನ್ಯಗಳು ನಮ್ಮ ಜೀವಕೋಶಗಳ ಮಟ್ಟದಲ್ಲಿ ಕೆಲಸಮಾಡುತ್ತವೆ. ಹಳೆಯ ಜೀವಕೋಶಗಳನ್ನು ಸುಟ್ಟುಹಾಕಿ ಅವುಗಳ ಜಾಗದಲ್ಲಿ ಬೆಳಕಿನಿಂದ ತುಂಬಿರುವ ಹೊಸ ಜೀವಕೋಶಗಳನ್ನು ಸೃಷ್ಟಿಸುವುದರಿಂದ, ನಮ್ಮ ದೇಹಗಳು ಬೆಳಕಿನ ದೇಹಗಳಾಗಿ ಬದಲಾಗುತ್ತವೆ. ಈ ಬೆಳಕಿನ ದೇಹಗಳಿಗೆ ಮುಪ್ಪು–ಖಾಯಿಲೆ–ಹಸಿವೆಗಳ ಬಾಧೆಯಿರುವುದಿಲ್ಲ. ನಮಗೆ ನಿದ್ರೆಯ ಅಗತ್ಯವೂ ಇರುವುದಿಲ್ಲ. ಋಷಿಗಳು ಹೇಳುವಂತೆ, ಬೆಳಕಿನ ದೇಹದಲ್ಲಿ ಉಳಿಯಲು, ನಾವು ಪ್ರತಿದಿನ 5 ಗಂಟೆಗಳ ಕಾಲ ಧ್ಯಾನ ಮಾಡಬೇಕಾಗುತ್ತದೆ.

ರಾ–ಚೈತನ್ಯಗಳು ನಮ್ಮ ಇಚ್ಛಾಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತವೆ. ಋಷಿಗಳು ಮತ್ತು ದೇವರು ನಿಧಾನವಾಗಿ ಇದನ್ನು ಇಡೀ ಬ್ರಹ್ಮಾಂಡಕ್ಕೆ ವಿಸ್ತರಿಸುತ್ತಾರೆ. ಆಗ ಈ ಬ್ರಹ್ಮಾಂಡದಿಂದ ಎಲ್ಲ ನಕಾರಾತ್ಮಕತೆಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಆಗ ಇಡೀ ಬ್ರಹಾಂಡದಲ್ಲಿ ಸತ್ಯಲೋಕವೇ ಇರುತ್ತದೆ.

ಬೆಳಕಿನ ಕಾರ್ಯಕರ್ತರು ಈ ಮಟ್ಟದಲ್ಲಿ ಮಾನವರ ಸಂಪರ್ಕದಲ್ಲಿರಬೇಕಾದ್ದರಿಂದ ಅವರು ಬೆಳಕಿನ ದೇಹಕ್ಕೆ ಬದಲಾಗಬಹುದು, ಅಥವಾ ಆಗದೆಯೂ ಇರಬಹುದು.

ಋಷಿಗಳು ಇತ್ತೀಚೆಗೆ ಕಂಡುಕೊಂಡಂತೆ ಅವ್ಯಕ್ತಬ್ರಹ್ಮ, ಪರಬ್ರಹ್ಮಲೋಕವಲ್ಲದೆ ಅನೇಕ ವಿಶ್ವಗಳನ್ನು ಸೃಷ್ಟಿಸಿದ್ದಾನೆ. ಅವುಗಳ ಬಗ್ಗೆ ಅಧ್ಯಯನ ಮಾಡಲು ಋಷಿಗಳು ಕೆಲವು ಪ್ರಮುಖ ವಿಶ್ವಗಳಿಗೆ ಈಗಾಗಲೇ ಹೋಗಿದ್ದಾರೆ. ಅವ್ಯಕ್ತಬ್ರಹ್ಮ ಅಸಾಧಾರಣ ಸಾಮರ್ಥ್ಯಗಳಿರುವ 'ಮಂಗಳ ಬ್ರಹ್ಮ' ಎಂಬ ಋಷಿಯನ್ನು ನಮ್ಮ ಭೂಮಿಗೆ ಕಳುಹಿಸಿದ್ದಾನೆ. ಆ ಋಷಿ ಕೆಲವು ನಿಯಮಗಳಲ್ಲಿ ಬದಲಾವಣೆಗಳನ್ನು ತರುವುದರೊಂದಿಗೆ, ಅವ್ಯಕ್ತಬ್ರಹ್ಮನು ಅಳವಡಿಸಲು ನಿರ್ಧರಿಸಿರುವ ಕೆಲವು ಸಂಗತಿಗಳನ್ನು ಕಾರ್ಯರೂಪಕ್ಕೆ ತರುತ್ತಾರೆ. ಅವರು ನಮ್ಮೆಲ್ಲರಿಗೂ ನೆರವಾಗುತ್ತಾರೆ.

**23–8–2009**

ಆಧ್ಯಾತ್ಮಿಕವಾಗಿ ತಪ್ಪುದಾರಿ ತುಳಿದವರು ಕ್ಷುದ್ರ ಚೈತನ್ಯಗಳ ಚಾನಲ್‌ಗಳಾಗಿ ಬದಲಾಗುವುದನ್ನು ಕಂಡರೆ ದುಃಖವಾಗುತ್ತದೆ. ನಮ್ಮಲ್ಲಿ ಬಲವಾದ ನಕಾರಾತ್ಮಕ ಯೋಚನೆಗಳಿದ್ದರೆ, ಅವು ನಮಗೆ ತಿಳಿಯದಂತೆಯೇ ನಮ್ಮನ್ನು ನಕಾರಾತ್ಮಕ ಚೈತನ್ಯಗಳ ಚಾನಲ್‌ಗಳಾಗಿ ಬದಲಾಯಿಸುತ್ತವೆ ಮತ್ತು ನಾವು ಋಷಿಗಳ ವಿರುದ್ಧ ಕೆಲಸ ಮಾಡುತ್ತಿರುತ್ತೇವೆ.

28 ಮಹಾಯುಗಗಳ ನಂತರ ಇದೇ ಮೊದಲ ಬಾರಿಗೆ ನಮ್ಮ ಸೃಷ್ಟಿಯಲ್ಲಿ ಆಧ್ಯಾತ್ಮಿಕ ನಿಯಮಗಳನ್ನು ಪುನರ್–ರೂಪಿಸಲಾಗುತ್ತಿದ್ದು, ಇಚ್ಛಾಸ್ವಾತಂತ್ರ್ಯವನ್ನು ನಿಯಂತ್ರಣಗೊಳಿಸಿ, ಮೊಟಕುಗೊಳಿಸಲಾಗುತ್ತದೆ ಅಥವಾ ತೆಗೆದು ಹಾಕಲಾಗುತ್ತದೆ. ಈ ಸಂಗತಿಗಳ ಕುರಿತಾದ ಚರ್ಚೆ ಈಗ ನಡೆಯುತ್ತಿದೆ. ಈ ಭೂಮಿಯಲ್ಲಿ ನಕಾರಾತ್ಮಕತೆ ಲವಲೇಶವೂ ಉಳಿಯದಂತೆ ನಿವಾರಿಸಲಾಗುತ್ತದೆ. ಇಲ್ಲಿ ಕಲಿಯುಗವಾಗಲೀ, ಮಹಾವಿಷ್ಣುವಿನ ಹತ್ತು ಅವತಾರಗಳಾಗಲೀ ಇರುವುದಿಲ್ಲ. ವ್ಯಕ್ತಿಯೊಬ್ಬ ತನ್ನ ತಪ್ಪಿಗಾಗಿ ತೀವ್ರವಾಗಿ ಪಶ್ಚಾತ್ತಾಪ ಪಟ್ಟರೆ ಮಾತ್ರ ಅವನನ್ನು ಕ್ಷಮಿಸಲಾಗುತ್ತದೆ. ಮುಂಚೆ ಬಹಳಷ್ಟು ಕ್ಷಮೆಯಿರುತ್ತಿತ್ತು. ಇದನ್ನು ಈಗ ಪುನರ್–ವಿಮರ್ಶಿಸಲಾಗುತ್ತಿದೆ.

ನಮ್ಮ ಮೌಲ್ಯವ್ಯವಸ್ಥೆಯ ವ್ಯಾಖ್ಯಾನವನ್ನು ಪುನರ್–ರೂಪಿಸಲಾಗುತ್ತಿದೆ. ಸಮಾಧಿಯ ಹೊಸ ಹಂತಗಳು ಜಾರಿಗೆ ಬರುತ್ತವೆ. 'ಕುಂಡಲಿನಿ'ಯಲ್ಲಿ ಬಹಳಷ್ಟು ಬದಲಾವಣೆಗಳು ಸಾಧ್ಯವಾಗಲಿವೆ. ಹಿಂದಿನ ನಾಡಿವ್ಯವಸ್ಥೆಯ ಜಾಗದಲ್ಲಿ ಹೊಸ, ಒಂದೇ ನಾಡಿವ್ಯವಸ್ಥೆಯಿರುತ್ತದೆ. ಋಷಿಗಳು ಮತ್ತು ದೇವರೊಂದಿಗಿನ ಸಂಪರ್ಕದಲ್ಲಿ ಹೊಸಹೊಸ ಹಂತಗಳಿದ್ದು, ಇದರಿಂದ ಅವರೊಂದಿಗಿನ ಸಂಪರ್ಕ ಸರಳ ಮತ್ತು ಸುಲಭ ಆಗುತ್ತದೆ. ನಾವೆಂದೂ ಕೇಳಿರದಿದ್ದ ಹೊಸ ಸಾಮರ್ಥ್ಯಗಳು ನಮ್ಮದಾಗುತ್ತವೆ. ಹೊಸ ಸಿದ್ಧಿಗಳನ್ನು ನಾವು ಅನುಭವಿಸುತ್ತೇವೆ. ಪ್ರೀತಿಯ ಹೊಸ ಆಯಾಮಗಳು ಪ್ರಕಟಗೊಳ್ಳುತ್ತವೆ. 2012ರ ನಂತರದ ಬದುಕು ಸಂಪೂರ್ಣವಾಗಿ ಹೊಸತಾಗಿ, ವಿಭಿನ್ನವಾಗಿರುತ್ತದೆ. ಆಗ ಹೊಸ ಋತುಗಳಿರುತ್ತವೆ. 2012 ಒಂದು ವಾಸ್ತವ ಎನ್ನುವುದನ್ನು ಅರ್ಥಮಾಡಿಕೊಂಡು, ಅದನ್ನು ದಾಟಲು ನಾವು ಸಿದ್ಧಗೊಳ್ಳಬೇಕು.

ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ವೈಯಕ್ತಿಕವಾದ ಕಾರ್ಯಯೋಜನೆಯಿರಬೇಕು. ಪ್ರತಿದಿನ ಕಡ್ಡಾಯವಾಗಿ ಮೂರು ಗಂಟೆಗಳ ಕಾಲ ಧ್ಯಾನಮಾಡಬೇಕು. ಶಂಬಲದ ಎಲ್ಲ ನಿಯಮಗಳನ್ನೂ ನಾವು ಅಭ್ಯಾಸಮಾಡಬೇಕು. ಎಲ್ಲಕ್ಕಿಂತ ಮುಖ್ಯಸಂಗತಿಯೆಂದರೆ ನಾವು ಋಷಿಗಳೊಂದಿಗೆ ಸಂಪರ್ಕ ಸಾಧಿಸಬೇಕು. 2012ರ ನಂತರ ಋಷಿಗಳು ನಮಗೆ ಹೊಸ ಜ್ಞಾನ, ಚೈತನ್ಯಗಳು ಮತ್ತು ನೆರವನ್ನು ನೀಡಲು ಆಸ್ಪದವಾಗುವುದಿಲ್ಲ. ನಾವು ನಮ್ಮದೇ ವಿವೇಕ, ಶಕ್ತಿ ಮತ್ತು ಬೆಳಕಿನಲ್ಲಿ ಬದುಕುವುದಕ್ಕೆ ಪ್ರಾರಂಭಿಸಬೇಕು.

ಆಗಸ್ಟ್ 28ರ ನಂತರ ಬಿಡುಗಡೆಯಾಗಲಿರುವ ಹೊಸ ಚೈತನ್ಯಗಳು ನಮಗೆ ಉತ್ತಮ ಆರೋಗ್ಯ ಮತ್ತು ಹಲವಾರು ಪ್ರಯೋಜನಗಳನ್ನು ತಂದುಕೊಡುತ್ತವೆ. ನಮ್ಮ ಸಮಸ್ಯೆಗಳಿಗೆ ಅವು ತ್ವರಿತವಾದ ಪರಿಹಾರಗಳನ್ನು ತಂದುಕೊಡುತ್ತವೆ. ಅತ್ಯಂತ ಸೂಕ್ತವಾದ ಆ ಆಧ್ಯಾತ್ಮಿಕ ಉತ್ತರಗಳನ್ನು ನಾವು ಒಪ್ಪಿಕೊಳ್ಳಬೇಕು. ನಮಗೆ ಬೆಳೆಯಲು ಹೊಸ ಅವಕಾಶಗಳು ದೊರೆಯುತ್ತವೆಯಲ್ಲದೆ, ಬೆಳಕಿನ ದೇಹಗಳಾಗಿ ಬದಲಾಗಲು ನಮಗೆ ನೆರವು ಸಿಗುತ್ತದೆ. ಈ ಚೈತನ್ಯಗಳು ನಮಗೆ ಮಾರ್ಗದರ್ಶನ ನೀಡುತ್ತವೆ ಮತ್ತು ಸರಿಯಾದ ಆಯ್ಕೆಯನ್ನು ಮಾಡಲು ನೆರವಾಗುತ್ತವೆ. ನಾವು ತಪ್ಪು ಮಾಡುವುದನ್ನು ಮುಂದುವರೆಸಿದರೆ ಆಗ ತಕ್ಷಣವೇ ನಮ್ಮನ್ನು ಸರಿಪಡಿಸಿ, ಶಿಕ್ಷಿಸಲೂ ಈ ಚೈತನ್ಯಗಳು ಹಿಂಜರಿಯುವುದಿಲ್ಲ. ನಮ್ಮ ಕರ್ಮಗಳನ್ನು ತ್ವರಿತವಾಗಿ ನಿವಾರಿಸಲೂ ಇವು ನಮಗೆ ನೆರವಾಗುತ್ತವೆ.

ನಾವು ಪರಬ್ರಹ್ಮನೇ ಸರ್ವಶ್ರೇಷ್ಠ ಎಂದು ಭಾವಿಸಿದ್ದೆವು. ಆದರೆ ಅಜ್ಞಾತ ವಿಶ್ವದಲ್ಲಿ ಇನ್ನೂ ಅನೇಕ ಚೇತನಗಳಿವೆ. ದೇವರೆಂದರೆ ಯಾರು ಎನ್ನುವುದನ್ನು ನಾವಿನ್ನೂ ತಿಳಿದುಕೊಳ್ಳಬೇಕಿದೆ! ಈ ಸಂಗತಿಯೇ ಬೆಚ್ಚಿಬೀಳಿಸುವಂತಿದೆ. ಇಂಥ ನಿಸ್ವಾರ್ಥ ಕೆಲಸವನ್ನು ಮಾಡುತ್ತಿರುವ ಋಷಿಗಳು, ದೇವರಿಗೆ ಸದಾ ಪ್ರೀತಿಪಾತ್ರರು. ಕೆಲವರು ಋಷಿಗಳನ್ನು ಲಘುವಾಗಿ ಪರಿಗಣಿಸುತ್ತಾರೆ. ಋಷಿಗಳ ವಿರುದ್ಧ ಕೆಲಸಮಾಡುವವರನ್ನು ದೇವರು ಹಾಗೇ ಬಿಡುವುದಿಲ್ಲ. ಈ ಸಂಗತಿಯನ್ನು ನಾವು ಮನಸ್ಸಿನಲ್ಲಿಡಬೇಕು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ವರ್ಷಾ ಗುರ್ಜಾರ್**

"Beyond 2012" ಪುಸ್ತಕವನ್ನು ಓದಿದಾಗ ನನಗೆ "ಬೆಳಕಿನ ಬಾಗಿಲುಗಳು" ಪುಸ್ತಕವನ್ನು ಓದಿದಾಗ ಆದ ಅನುಭವವಾಯಿತು. ಅದು ಎಷ್ಟು ಕುತೂಹಲಕಾರಿಯಾಗಿತ್ತೆಂದರೆ, ಪೂರ್ತಿ ಓದಿ ಮುಗಿಸುವವರೆಗೆ ಪುಸ್ತಕವನ್ನು ಬಿಟ್ಟು ಏಳಲಿಲ್ಲ. ಗಂಭೀರವಾದ ವಿಷಯಗಳನ್ನು ಅತ್ಯಂತ ಸರಳವಾಗಿ ನಿರೂಪಿಸಿರುವ ಈ ಪುಸ್ತಕ, ಅದ್ವಿತೀಯವಾದುದು. ನಿಮ್ಮ ಬರವಣಿಗೆಯ ವಿಶಿಷ್ಟ ಶೈಲಿ ಮತ್ತು ಭಾವನೆಗಳು ಈ ಪುಸ್ತಕದಲ್ಲಿ ಅಭಿವ್ಯಕ್ತವಾಗಿವೆ. ನಿಮ್ಮ ಮುಖಾಂತರ ಎಷ್ಟೊಂದು ಜ್ಞಾನ ಸುಲಭವಾಗಿ ನಮಗೆ ದೊರೆಯುತ್ತಿದೆ! ಈ ಅದ್ಭುತ ಪುಸ್ತಕಕ್ಕಾಗಿ ನಿಮಗೆ ಧನ್ಯವಾದಗಳು.

–ನೆಡು ದುರ್ಗೈ

"Beyond 2012", ಈ ಭೂಮಿಯಲ್ಲೇ ಬಹು ಅಪರೂಪದ ಪುಸ್ತಕ. ಅದು ಉನ್ನತ ಲೋಕಗಳಲ್ಲಿರುವ ಋಷಿಗಳು ಚಾನಲ್ ಮಾಡಿದ ಹೊಚ್ಚ ಹೊಸದಾದ ಜ್ಞಾನವನ್ನು ಹೊಂದಿದೆ. ಈ ಪುಸ್ತಕವು ಮಾನವ ಜನಾಂಗಕ್ಕೆ ಈವರೆಗೆ ತಿಳಿಯದಿರುವ ವಾಸ್ತವಗಳಿಗೆ ನಮ್ಮನ್ನು ಜಾಗ್ರತಗೊಳಿಸುತ್ತದೆ; ವಿಭಿನ್ನ ಮಟ್ಟಗಳಲ್ಲಿ ಋಷಿಗಳು ಮಾಡುತ್ತಿರುವ ಕೆಲಸದ ಒಂದು ಇಣುಕುನೋಟವನ್ನು ನೀಡುತ್ತದೆ. ಮಾನವಕುಲಕ್ಕೆ ಭರವಸೆಯನ್ನು ನೀಡುವುದರೊಂದಿಗೆ, ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯ ಬಗ್ಗೆ ಹೇಳುತ್ತದೆ.

ಇಂಥ ಪುಸ್ತಕವನ್ನು ಜನತೆಯ ಮುಂದಿಡಲು ಕೆಚ್ಚೆದೆ ಇರಬೇಕು. ಈ ಪುಸ್ತಕ ಬುದ್ಧಿವಂತ ವರ್ಗಕ್ಕೊಂದು ಸವಾಲು.

–ಶ್ಯಾಮಲ

"Beyond 2012" ಪುಸ್ತಕ ಅದ್ಭುತವಾಗಿದೆ. ಈ ಕುತೂಹಲಕಾರಿ ಪುಸ್ತಕವನ್ನು ತೀವ್ರಾಸಕ್ತಿಯಿಂದ ಓದಿದೆ. ನಮಗೆ ಇಂಥ ಅಪರೂಪದ ಪುಸ್ತಕವನ್ನು ಕೊಟ್ಟ ನಿಮಗೆ ಧನ್ಯವಾದಗಳು.

–ಸುಜಾತ ನೆಡು

ಕಳೆದ ಹತ್ತು ದಿನಗಳಿಂದ ಪ್ರತಿದಿನ 3ಗಂಟೆ ಧ್ಯಾನ ಮಾಡುತ್ತಿದ್ದೇನೆ. ನಾನು ರಾ–ಗ್ರೂಪಿನ ಸದಸ್ಯಳಾಗಲು ಆಗಲು ಬಯಸುತ್ತೇನೆ. 3ಗಂಟೆ ಧ್ಯಾನ ಮಾಡುವ ಬಗ್ಗೆ ಓದಿದಾಗ, ನನ್ನ ಮೊದಲ ಪ್ರತಿಕ್ರಿಯೆ,'!!!'.

ಆದರೆ ನನ್ನ ಅಂತರಾಳಕ್ಕೆ ಇದೊಂದು ಬಹು ಅಪರೂಪದ ಅವಕಾಶ ಎಂಬುದು ಗೊತ್ತಿತ್ತು. ನಾನು ಖಂಡಿತವಾಗಿ ಈ ಅವಕಾಶವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಈ ಅವಕಾಶ ನನಗೊಂದು ಆಕಾಶ–ನೌಕೆಯಲ್ಲಿ ಸೀಟು ಸಿಕ್ಕಂತೆ. ನಾನು ಮಾಡಬೇಕಾಗಿರುವುದೆಲ್ಲ, ಅದನ್ನು ಹತ್ತುವುದು ಅಷ್ಟೆ.

–ಲಿನ್ ಕರಟಾನಿ

ರಿಟ್ರೀಟ್ ಸೆಷನ್‌ನಲ್ಲಿ ನಡೆದಂತಹ ವಿಚಾರ ವಿನಿಮಯ ಅದ್ಭುತ ಹಾಗು ಆತ್ಮತೃಪ್ತಿಕರವಾಗಿತ್ತು. ಇದರಿಂದ ನಮ್ಮಲ್ಲಿ ಉಂಟಾದ ವಿಸ್ತಾರತೆಯನ್ನು ವಿವರಿಸಲು ಸಾಧ್ಯವಿಲ್ಲ, ಅದನ್ನು ಅನುಭವಿಸಿಯೇ ತಿಳಿಯಬೇಕು. ನಿಮ್ಮ ಮೂಲಕ ಬರುವ ಈ ಮಹತ್ವದ ಕೊಡುಗೆಗಾಗಿ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ವಿದ್ಯಾ ವೀರ್‌ಕರ್

ತಪೋನಗರದ ಆವರಣವನ್ನು ಪ್ರವೇಶಿಸಿದ ಕೂಡಲೇ, ನಾನು ವೆಬ್–ಸೈಟ್‌ನಲ್ಲಿ ನೋಡಿದ ಚಿತ್ರಗಳು ಜೀವಂತವಾಗಿ ನನ್ನ ಮುಂದೆ ಇದ್ದವು. ಅವನ್ನು ನೋಡಿ ಭಾವುಕಳಾದೆ. ನಾನು ನಿಜವಾಗಿಯೂ ತಪೋನಗರದಲ್ಲಿ ಇದ್ದೇನೆ ಎಂದು ತಿಳಿಯಲು ಕೆಲವು ನಿಮಿಷಗಳೇ ಬೇಕಾಯಿತು. ನಿಮ್ಮನ್ನು ಭೇಟಿಯಾಗಿ ನಿಮ್ಮ ಅಗಾಧವಾದ ಪ್ರೀತಿಯನ್ನು ಅನುಭವಿಸಲು ಸಾಧ್ಯವಾದುದು, ಈಗ ಒಂದು ಕನಸಿನಂತೆ ಅನಿಸುತ್ತಿದೆ. ನನ್ನ ಭಾವನೆಗಳನ್ನು ಹೇಳಿಕೊಳ್ಳಲು ನನ್ನಲ್ಲಿ ಪದಗಳಿಲ್ಲ. ನನ್ನ ಎಲ್ಲಾ ಅಗತ್ಯಗಳನ್ನು ನಾನು ಕೇಳದೆಯೇ ಪೂರೈಸಿರುವಿರಿ. ಅದೊಂದು ನನ್ನ ಜೀವನದ ಮರೆಯಲಾಗದ ದಿನ.

–ಪದ್ಮಜಾ

ಕಳೆದ ವರ್ಷವಿಡೀ ನಮಗೆ ತುಂಬ ತೊಂದರೆಗಳಿದ್ದರೂ ನಿಮ್ಮ ಅನುಗ್ರಹದಿಂದ, ಅವನ್ನು ಧೈರ್ಯವಾಗಿ ಎದುರಿಸಿದೆವು. ನಿಮ್ಮನ್ನು ಭೇಟಿಯಾದ ನಂತರ ನಾವು ಸರಿಯಾದ ಮಾರ್ಗವನ್ನು ಆರಿಸಿಕೊಂಡಿದ್ದೇವೆ ಎಂಬುದು ಅರಿವಾಯಿತು. ನಿಮ್ಮಿಂದ ನಮಗೀಗ ನಮ್ಮ ಜೀವನದ ಉದ್ದೇಶ ಅರ್ಥವಾಗಿದೆ. ನಿಮ್ಮ ಮಾರ್ಗದರ್ಶನದಡಿ, ಈ ಮಾರ್ಗದಲ್ಲೇ ನಮ್ಮ ಸಾಧನೆಯನ್ನು ಮುಂದುವರಿಸಲು ಇಚ್ಛಿಸುತ್ತೇವೆ.

–ಸ್ಮಿತಾ ಗಿರಿ

ಧ್ಯಾನ ಮಾಡಲು ಆರಂಭಿಸಿದ ನಂತರ ನನ್ನ ಆತ್ಮವಿಶ್ವಾಸದ ಮಟ್ಟ ಹೆಚ್ಚಾಗಿದೆ. ನನಗೀಗ ಜನರೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗಿದೆ. ನನಗೆ, ಕೆಲವು ಘಟನೆಗಳು ಸಂಭವಿಸುವ ಮೊದಲೇ ಅವುಗಳ ಬಗ್ಗೆ ಹೇಗೋ ತಿಳಿಯುತ್ತದೆ.

–ಚಾರುಶೀಲ ಬಿರಾಜ್‌ದಾರ್

ನಾನು ಮತ್ತು ನನ್ನ ಪತಿ, ಒಬ್ಬ ಹೀಲರ್ ಬಳಿ ಹೋಗಿದ್ದೆವು. ಆಶ್ಚರ್ಯವೇನೆಂದರೆ ಹೀಲರ್ ನನಗೆ ಚಿಕಿತ್ಸೆ ಮಾಡುವಾಗ, ನೀವೇ ನನಗೆ ಚಿಕಿತ್ಸೆ ಮಾಡುತ್ತಿರುವಂತೆ ಕಂಡುದಾಗಿ, ನನ್ನ ಪತಿ ಹೇಳಿದರು. ನಿಮ್ಮ ದಿವ್ಯ ಚೈತನ್ಯಗಳು ನನ್ನೊಂದಿಗೆ ಇರುವುದಕ್ಕೆ ನಾನು ಅನುಗ್ರಹೀತಳಾಗಿದ್ದೇನೆ ಮತ್ತು ನಿಮ್ಮ ಕೃಪೆಗೆ ಪಾತ್ರಳಾಗಿದ್ದೇನೆ ಎನಿಸುತ್ತದೆ.

–ಮೇಘನಾ ರಾನಡೆ

ಶಿಕ್ಷಕರ ದಿನವಾದ ಇಂದು ನಿಮ್ಮ ಸಾಧಕರಿಗೆ ಮಾತ್ರ ಅಲ್ಲದೆ ಇಡೀ ಮನುಕುಲ ಮತ್ತು ವಿಶ್ವಕ್ಕೆ ನೀವು ನೀಡಿರುವ ಕೊಡುಗೆಗಾಗಿ ನಿಮ್ಮನ್ನು ಹೇಗೆ ಗೌರವಿಸಲಿ ಎಂಬುದು ನನಗೆ ತಿಳಿಯದು. ನಿಮ್ಮ ಕನಸನ್ನು ನನಸು ಮಾಡಲು ಪ್ರಯತ್ನಿಸುವೆ ಎಂದಷ್ಟೇ ಹೇಳಬಯಸುತ್ತೇನೆ.

–ನಿಖಿಲ್ ಗಾಂಧಿ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ನಮಗೆ ದೀಕ್ಷೆ ಸಿಕ್ಕಿದೆ ಎಂದು ಹೇಗೆ ತಿಳಿಯುವುದು?**

ಉ: ಸಾಮಾನ್ಯವಾಗಿ ಜನರು, ದೀಕ್ಷೆಯ ಸಮಯದಲ್ಲಿ ಪಡೆಯುವ ಚೈತನಗಳನ್ನು ಅನುಭವಿಸುತ್ತಾರೆ. ಕೆಲವರಿಗೆ ಅದರ ಅನುಭವವಾಗುವುದಿಲ್ಲ. ನಮಗೆ ಈ ಚೈತನ್ಯಗಳ ಅನುಭವಗಳು ಭೌತಿಕ ಮಟ್ಟದಲ್ಲಿ ಆಗುವುದಿಲ್ಲ. ಏಕೆಂದರೆ ಅವುಗಳ ಸ್ತರ ವಿಭಿನ್ನವಾಗಿದೆ. ನೀವು ನನ್ನ ಮಾತನ್ನು ನಂಬಬೇಕು. ಸಾಧನೆ ನಂಬಿಕೆಯ ಮೇಲೆ ಶುರುವಾಗಬೇಕು.

**ಪ್ರ: ಮಾಟಮಂತ್ರಗಳ ಕೆಟ್ಟ ಪರಿಣಾಮಗಳನ್ನು ಕಳೆದುಕೊಳ್ಳಲು 'ಬೆಳಕಿನ ಚಾನಲಿಂಗ್' ಸಾಕೇ?**

ಉ: ಬೆಳಕನ್ನು ಚಾನಲ್ ಮಾಡಿದರೆ ಬೇಕಾದಷ್ಟಾಯಿತು. ನೀವು ಬೆಳಕನ್ನು ಸ್ಮರಿಸಿಕೊಳ್ಳಿ. ಅಷ್ಟೇ ಸಾಕು.

**ಪ್ರ: ನಾವು ನಮ್ಮ ಮನೆಯವರನ್ನು ಮಾಟಮಂತ್ರಗಳಿಂದ ರಕ್ಷಿಸುವುದು ಹೇಗೆ?**

ಉ: ಅವರಿಗೆ ಬೆಳಕನ್ನು ಸ್ಮರಿಸಿಕೊಳ್ಳಲು ಮತ್ತು ಅದನ್ನು ಅನುಭವಿಸಲು ಹೇಳಿ. ಹಾಗೆಯೇ ಅವರು ದಿನಾಲೂ ಏಳು ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡಲಿ. ನೀವು ಅವರಿಗೆ ಬೆಳಕನ್ನು ಕಳುಹಿಸಿ.

**ಪ್ರ: ತಪೋನಗರದಿಂದ ದೂರವಿರುವ ಜನರು ಬಹಳಷ್ಟು ಕಳೆದುಕೊಳ್ಳುತ್ತಾರೆ. ಇದಕ್ಕೆ ಏನಾದರೂ ದಾರಿ ಇದೆಯೇ?**

ಉ: ನಾವು ಭೌತಿಕ ಸಾಮೀಪ್ಯತೆ ಮುಖ್ಯವಲ್ಲ ಎಂದು ಅರಿತುಕೊಳ್ಳಬೇಕು. ನಿಮಗೆ ಸಾಧ್ಯವಾದಾಗಲೆಲ್ಲಾ ತಪೋನಗರವನ್ನು ಸಂದರ್ಶಿಸಿ. ತಪೋನಗರದಿಂದ ದೂರವಿರುವವರು ಎಲ್ಲಾ ಸಮಯದಲ್ಲೂ ಸಂಪರ್ಕ ಕಲ್ಪಿಸಿಕೊಳ್ಳಬಹುದು. ನೀವು ತಪೋನಗರದಲ್ಲಿ ಇದ್ದೀರೆಂದು, ಇಲ್ಲಿ ನನ್ನೊಂದಿಗೆ ಮಾತನಾಡುತ್ತ ಸಮಯ ಕಳೆಯುತ್ತಿದ್ದೀರೆಂದು ಕಲ್ಪನೆ ಮಾಡಿಕೊಳ್ಳಿ. ನೀವು ತಪೋನಗರಕ್ಕೆ ಸೂಕ್ಷ್ಮ ಶರೀರದಲ್ಲಿ ಬರಲು, ಒಂದು ಬಲವಾದ ಪ್ರೇರಣೆ ಮತ್ತು ಬಯಕೆ ಸಾಕು. ಆ ಮಟ್ಟದಲ್ಲಿ ನೀವು, ಇಲ್ಲಿ ಸೂಕ್ಷ್ಮ ಮಟ್ಟದಲ್ಲಿ ವಾಸಿಸುತ್ತಿರುವ ಜನರನ್ನು, ಇಲ್ಲಿ ಆಗುತ್ತಿರುವ ಅನೇಕ ವಿದ್ಯಮಾನಗಳನ್ನು ಕಾಣಬಹುದು.

**ಪ್ರ: ಮೂರು ಘಂಟೆ ಧ್ಯಾನ ಮಾಡಲಿಕ್ಕಾಗ ದವರಿಗೆ ಏನಾದರೂ ಸಲಹೆ ಇದೆಯೇ?**

ಉ: ನಮ್ಮ ದೇಹ 'ಬೆಳಕಿನ ದೇಹ' ಆಗಿ ಪರಿವರ್ತನೆಗೊಳ್ಳಲು, ನಮ್ಮ ದೇಹದಲ್ಲಿ ಕೆಲವು ಬದಲಾವಣೆಗಳಾಗಲು ನಾವು ಮೂರು ಘಂಟೆಗಳ ಕಾಲ ಧ್ಯಾನ ಮಾಡಬೇಕು. ಇದು ಸುಲಭವಲ್ಲ. ಮೂರು ಘಂಟೆ ಅವಧಿಯನ್ನು ತಲುಪಲು ನಿಮ್ಮದೇ ಆದ ಸಮಯವನ್ನು ತೆಗೆದುಕೊಳ್ಳಿ. ನೀವು ಧ್ಯಾನ ಮಾಡದ ಇತರ ಸಮಯದಲ್ಲಿ, ಶಂಬಲ ತತ್ವಗಳ ಯಾವುದೇ ಒಂದು ತತ್ವವನ್ನು ಅಭ್ಯಸಿಸಿರಿ.

**ಪ್ರ: ಪ್ರಾಣಿಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ಆತ್ಮಗಳಿವೆಯೇ?**

ಉ: ಇಲ್ಲ. ಅವು ಪಳಗಿದ ಅಥವಾ ಉಗ್ರ ಪ್ರಾಣಿಗಳಾಗಿರುತ್ತವೆ.

**ಪ್ರ: ಕಳೆದ ನಾಲ್ಕು ಯುಗಗಳಲ್ಲಿ, ಯಾವ ಯುಗದಲ್ಲಿ ಪ್ರಾಣಿಗಳ ಬೇಟೆ ಶುರುವಾಯಿತು?**

ಉ: ತ್ರೇತಾಯುಗದ ಮಧ್ಯದಲ್ಲಿ, ಪ್ರಾಣಿ ಬೇಟೆ ಶುರುವಾಯಿತು.

**ಪ್ರ: ಪ್ರಾಣಿಗಳನ್ನು ತಿನ್ನುವ ಅಭ್ಯಾಸ ಪ್ರಾಣಿಬಲಿಯಿಂದ ಶುರುವಾಯಿತೇ?**

ಉ: ಇವೆರಡಕ್ಕೆ ಯಾವುದೇ ಸಂಬಂಧವಿಲ್ಲ. ಆಹಾರದ ಹುಡುಕಾಟದಲ್ಲಿ ಪ್ರಾಣಿ ಬೇಟೆ ಮತ್ತು ತಿನ್ನುವ ಅಭ್ಯಾಸವಾಯಿತು. ಆಮೇಲೆ ಪ್ರಾಣಿಬಲಿಯ ಪ್ರವೇಶವಾಯಿತು.

**ಪ್ರ: ಮನುಷ್ಯರು ಪ್ರಾಣಿಗಳಾಗಿ ಅವತರಿಸುತ್ತಾರೆಯೇ?**

ಉ: ಇಲ್ಲ. ಶಾಪವೆತ್ತ ಮನುಷ್ಯ ಮಾತ್ರ ಪ್ರಾಣಿಯಾಗಿ ಹುಟ್ಟುತ್ತಾನೆ.

**ಪ್ರ: ಪ್ರಾಣಿಬಲಿಯ ಹಿಂದೆ ಯಾವುದಾದರೂ ದೈವ ಸಂಕಲ್ಪವಿದೆಯೇ?**

ಉ: ಪ್ರಾಣಿಬಲಿಯ ಹಿಂದಿರುವುದು ಮನುಷ್ಯ ಸಂಕಲ್ಪ, ದೈವ ಸಂಕಲ್ಪವಲ್ಲ.

**ಪ್ರ: ನಾವು ಬೆಳಕಿನ ದೇಹದಲ್ಲಿದ್ದಾಗ ಕರ್ಮಗಳು ಬರುತ್ತವೆಯೇ?**

ಉ: ಇಲ್ಲ. ನಾವು ಬೆಳಕಿನ ದೇಹದಲ್ಲಿದ್ದಾಗ, ಕರ್ಮಗಳನ್ನು ಹೊಂದಿರುವುದಿಲ್ಲ. ಆದರೆ ಕರ್ಮಗಳನ್ನು ಆಕರ್ಷಿಸಬಹುದು.

**ಪ್ರ: 2012 ನಂತರ ಬದುಕುವ ಉದ್ದೇಶವೇನು?**

ಉ: ಮೊದಲಿದ್ದ ಉದ್ದೇಶವೇ ಆಗಲೂ ಇರುತ್ತದೆ. ನಾವು ಬದುಕನ್ನು ಮುಂದುವರಿಸುತ್ತೇವೆ ಮತ್ತು ಅದನ್ನು ಅನುಭವಿಸುತ್ತೇವೆ. ಕೆಲವರು ಸೇವೆಯನ್ನು ಆರಿಸಿಕೊಳ್ಳುತ್ತಾರೆ.


**ಪ್ರ: 2012 ನಂತರ ನಮ್ಮ ಪಾತ್ರವೇನು?**

ಉ: ಇಷ್ಟು ಅಪರೂಪದ ಜ್ಞಾನ ಮತ್ತು ಚೈತನ್ಯಗಳ ಉಡುಗೊರೆ ಪಡೆದಮೇಲೆ, ನಾವು ಬೇರೆಯುವರಿಗೆ ಸಹಾಯ ಮತ್ತು ಮಾರ್ಗದರ್ಶನ ಮಾಡಬೇಕು. ❑


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate - Dhyana Yoga | |
| - Descent of Soul - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| - ಧ್ಯಾನ ಮಾಡುವುದು ಹೇಗೆ - ಧ್ಯಾನ ಯೋಗ | |
| - ಆತ್ಮದ ಅವರೋಹಣ -ಶಂಬಲ ನಿಯಮಗಳ ಅಭ್ಯಾಸ | |
| - ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

## ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)**

ಒಮ್ಮೆ ನನ್ನ ಕನಸಿನಲ್ಲಿ 21–12–2009ರಂದು ಭೂಮಿ ಸುತ್ತುವುದು ನಿಂತಾಗ ತಪೋನಗರದಲ್ಲಿ ಆಗಬಹುದಾದ ಘಟನೆಗಳನ್ನು ನೋಡಿದೆ. ಆಗ ಸಂಜೆಗತ್ತಲಾಗಿತ್ತು. ಮಾನಸಿಯ ದ್ವಾರ ಮುಚ್ಚುತ್ತಾ ಇತ್ತು. ಜನರೆಲ್ಲ ಅದರೊಳಗೆ ಹೋಗಲು ನುಗ್ಗುತ್ತಿದ್ದರು. ಕೆಲವರು ಒಳಗೆ ಬಂದರು. ಇನ್ನು ಕೆಲವರು ಹೊರಗೆ ಉಳಿದರು. ಮಾನಸಿಯ ಹೊರಗಿನ ಪ್ರಪಂಚ, ಪ್ರಕೃತಿಯ ವಿಕೋಪ ಮತ್ತು ಆಪತ್ತುಗಳಿಂದ ಅಲ್ಲೋಲ ಕಲ್ಲೋಲವಾಗಿತ್ತು. ಜನರೆಲ್ಲ ಆ ಆಘಾತದಿಂದ ಭಯಗೊಂಡಿದ್ದರು. ತಪೋನಗರದೊಳಗೆ ಬಂದ ಜನ ಕೂಡ ಅದೇ ಸ್ಥಿತಿಯಲ್ಲಿದ್ದರು. ಸ್ವಯಂಸೇವಕರು, ಆ ಪರಿಸ್ಥಿತಿಯನ್ನು ನಿಭಾಯಿಸಲು ಜನರಿಗೆ ಸಹಾಯಮಾಡುತ್ತಿದ್ದರು. ಕೆಲವರು ಮಾತ್ರ ಅರ್ಥಮಾಡಿಕೊಂಡು ಶಾಂತರಾಗಿ ಧ್ಯಾನಕ್ಕೆ ಕುಳಿತರು.

ಇದ್ದಕ್ಕಿದ್ದಂತೆ ಆಕಾಶದಲ್ಲಿ ಒಂದು ಸ್ತ್ರೀ ಆಕೃತಿ ಕಾಣಿಸಿತು. ಎಲ್ಲರನ್ನು ಆಕೆಯ ಬಳಿ ಕರೆತರುವಂತೆ ನನಗೆ ಆದೇಶಿಸಿದಳು. ಆ ವಿಪತ್ಕಾಲವನ್ನು ನಿಭಾಯಿಸುವುದಕ್ಕೋಸ್ಕರ, ಆಕೆ ಎಲ್ಲರಿಗೂ 'ಜೀವ–ಹನಿ'ಯನ್ನು ನೀಡುವುದಾಗಿ ತಿಳಿಸಿದಳು. ಧ್ಯಾನಿಗಳು ಆಕೆಯ ಮಾತನ್ನು ಅನುಸರಿಸಿದರು. ಧ್ಯಾನಿಗಳಲ್ಲದವರು ಅದಕ್ಕೆ ಸಮ್ಮತಿಸಲಿಲ್ಲ. ಕೆಲವರು 'ಜೀವ–ಹನಿ'ಯನ್ನು ಪಡೆದು ಸಮಾಧಾನಗೊಂಡು ಧ್ಯಾನಕ್ಕೆ ಕುಳಿತರು. ಗುರೂಜಿಯವರು ಎಲ್ಲರನ್ನೂ ಸಮಾಧಾನ ಪಡಿಸಲು ಪ್ರಯತ್ನಿಸುತ್ತಿದ್ದರು. ಎಲ್ಲರೂ ಆಕೆಯಿಂದ ಒಂದೊಂದು ಜೀವಹನಿಯನ್ನು ಪಡೆದೆವು. ಎಲ್ಲರಿಗೂ ಊಟವನ್ನು ನೀಡಲಾಯಿತು. ಊಟ ತಳಮಳವನ್ನು ಕಡಿಮೆಮಾಡಿತು. ಆ ಸ್ತ್ರೀ, ಮಾನಸೀದೇವಿ ಎಂದು ನನಗೆ ಅರಿವಾಯಿತು. ಇಡೀ ಮಾನಸಿ ಪ್ರದೇಶ ಸುರಕ್ಷಿತವಾಗಿ ಯಾವ ಅಹಿತಕರ ಘಟನೆ ನಡೆಯದೆ ಪ್ರಶಾಂತವಾಗಿತ್ತು.

—ಪ್ರಿಯಾಂಕ ಮಿತ್ರ

ಬೇಗ ಪರಿವರ್ತನೆಯಾಗಲು ನಾನು ಏನು ಮಾಡಬೇಕು ಎಂದು ಬೆಳಕನ್ನು ಕೇಳಿದೆ. ಅದಕ್ಕೆ ಬೆಳಕು, "ಒಪ್ಪಿಗೆ ಇದಕ್ಕೆ ಕೀಲಿಕೈ. ಜನರನ್ನು ಅಥವಾ ಪರಿಸ್ಥಿತಿಯನ್ನು ಒಪ್ಪಿಕೊಂಡಾಕ್ಷಣ, ನಾವು ಮುಂದೆ ಹೋಗುವುದು ಸುಲಭವಾಗುತ್ತದೆ. ಅಸ್ವೀಕಾರ ಹಿಂತಡೆಯುತ್ತದೆ. ಪರಿವರ್ತನೆ ಹಿಮ್ಮುಖವಾಗುತ್ತದೆ," ಎಂದು ಹೇಳಿತು. ಈ ಮಾತುಗಳನ್ನು ಕೇಳಿ, ನಾನು ಬೆಳಕಿಗೆ ಕೃತಜ್ಞತಾಪೂರ್ವಕವಾಗಿ ವಂದಿಸಿದೆ.

ಒಂದು ದಿನ ವಿಶ್ವಾಮಿತ್ರ ಮಹರ್ಷಿಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾಗ ಸುಂದರವಾದ ಕಾಮನಬಿಲ್ಲನ್ನು ಕಂಡೆ. ಈ ಕಾಮನಬಿಲ್ಲು ನೀವಾಗಿದ್ದರೆ, ಅದರ ಪಕ್ಕದಲ್ಲಿ ಮತ್ತೊಂದು ಕಾಮನಬಿಲ್ಲನ್ನು ಉಂಟುಮಾಡಿ ಎಂದು ಹೇಳಿದೆ. ಕೆಲವು ನಿಮಿಷಗಳ ನಂತರ ಆಕಾಶದಲ್ಲಿ ಎರಡು ಕಾಮನಬಿಲ್ಲುಗಳನ್ನು ಕಂಡೆ! ಅವರಿಗೆ ಗೌರವ ಹಾಗೂ ಪ್ರೀತಿಯಿಂದ ನಮನಗಳನ್ನು ಅರ್ಪಿಸಿದೆ.

—ವಿದ್ಯಾ ಅರೋರ

ಒಮ್ಮೆ ನಾನು ಧ್ಯಾನವಮಾಡುತ್ತಿದ್ದಾಗ, ಭೂಮಿಯಿಂದಾಚೆ, ಸೂರ್ಯಮಂಡಲದಿಂದಾಚೆ ಇಡೀ ವಿಶ್ವವೇ ಕಾಣಬಹುದಾದಷ್ಟು ಎತ್ತರದ ಜಾಗದಲ್ಲಿ ನಾನಿದ್ದೆ. ಕತ್ತಲಲ್ಲಿ ಅನೇಕ ನಕ್ಷತ್ರ ಪುಂಜಗಳು ಅಲ್ಲಲ್ಲಿ ಪ್ರಕಾಶಿಸುತ್ತಿದ್ದುದನ್ನು ಕಂಡೆ. ಒಂದು ಸಪ್ತಋಷಿ ಗುಹೆಯನ್ನು ಹಾದು ಒಂದು ಸುಂದರವಾದ ಅಮೃತಶಿಲೆಯಿಂದ ಕಟ್ಟಿದ್ದ ದೇವಾಲಯದ ಮುಂದೆ ನಿಂತೆ. ಆ ದೇವಾಲಯದ ಸುತ್ತ ಒಂದು ಸುಂದರವಾದ ತೋಟ ಇತ್ತು. ಇದಾದ ನಂತರ ದಟ್ಟಕೆಂಪು ನೆಲಹಾಸು ಹಾಗೂ ಪರದೆಗಳನ್ನೊಳಗೊಂಡಿದ್ದ ಇನ್ನೊಂದು ದೇವಾಲಯವನ್ನು ತಲುಪಿದೆ. ಆ ದೇವಾಲಯದೊಳಗೆ ಒಂದು ದೊಡ್ಡ ಪ್ರಕಾಶಮಾನವಾದ ಬೆಳಕನ್ನು ಕಂಡೆ. ಅದಕ್ಕೆ ವಂದಿಸಿ ಅದರ ಮುಂದೆ ಕುಳಿತಾಗ, ಆ ಬೆಳಕು ನನ್ನನ್ನು ಪ್ರವೇಶಿಸಿದ ಅನುಭವವಾಯಿತು. ಸ್ವಲ್ಪ ಸಮಯದ ನಂತರ ನಾನು ಪುನಃ ಮೇಲೆ ಏರಲಾರಂಭಿಸಿದೆ. ಕೂಡಲೇ ಒಂದು ಸುರಂಗದ ಮುಖಾಂತರ ಹಾದು ಹೊರಬಂದೆ. ಅಲ್ಲಿ ಒಂದು ಬೆಳಕಿನ ಸಾಗರವನ್ನೇ ಕಂಡೆ. ಎಲ್ಲೆಲ್ಲೂ ಬೆಳಕೇ ಬೆಳಕು. ಆ ಬೆಳಕಿನಲ್ಲಿ ನನ್ನನ್ನು ನಾನೇ ಮರೆತೆ.

—ಗೋವಿಂದ ಗೋಪಾಲ ಜೈಸ್ವಾಲ್

ಒಂದು ಭಾನುವಾರ ತಪೋನಗರದಲ್ಲಿ ಧ್ಯಾನವನ್ನು ಮುಗಿಸಿ ಸಪ್ತಋಷಿಗಳಿಗೆ ಮತ್ತು ಅಂದು ಬಂದಿರಬಹುದಾದ ಅಶರೀರಿಗಳಿಗೆ ವಂದಿಸುತ್ತಿದ್ದಾಗ, ನನಗೆ ವಿಶ್ವಾಮಿತ್ರ ಮಹರ್ಷಿಗಳಿಗೆ ವಿಶೇಷವಾಗಿ ವಂದಿಸಬೇಕೆಂದು ಒಂದು ಆಲೋಚನೆ ಬಂದಿತು. ಈ ತಕ್ಷಣ ನನ್ನ ಇಡೀ ದೇಹದಲ್ಲಿ ಬೆಳಕಿನ ಸಂಚಾರವಾಗಿ, ಒಂದು ರೀತಿಯ ಆಹ್ಲಾದತೆ ನನ್ನನ್ನು ತುಂಬಿತು. ಇಡೀ ದಿನ ನನ್ನಲ್ಲಿ ಆಹ್ಲಾದತೆ ತುಂಬಿತ್ತು. —ವೇಣು

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ